ಗೋವಿಂದರಾಜ್ ಬೂದಗುಂಪಾ ಸಾರಥ್ಯದಲ್ಲಿ...

ಕನ್ನಡ ಪ್ರಾದೇಶಿಕ ಡಿಜಿಟಲ್ ವಾರಪತ್ರಿಕೆ

# GB NEWS ಕನ್ನಡ

SEARCHING OF TRUTH...............










## ಹಿಟ್ನಾಳ ಕುಟುಂಬವನ್ನ ಎದುರು ಹಾಕಿಕೊಂಡರೆ ಇಕ್ಬಾಲ್ ಅನ್ಸಾರಿ ರಾಜಕೀಯ ಜೀವನ ಅಂತ್ಯವಾಗುತ್ತಾ?





## 50 ಲಕ್ಷ ಲಂಚ ಕೊಟ್ಟರೆ ಮೆಡಿಕಲ್ ಶಾಪ್ ಲೈಸೆನ್ಸ್...?

## ಮಾನಸಿಕ ಅಸ್ವಸ್ಥನಂತೆ ಕಾಣುವ ಈತ ಯಾರು ಗೊತ್ತೇ...?



## YOUNG ಅಂದ್ರೆ ಹಿಂಗೇಗೂ ಇರೋದಲ್ಲ...



# ಹಿಟ್ನಾಳ ಕುಟುಂಬವನ್ನು ಎದುರು ಹಾಕಿಕೊಂಡರೆ ಇಕ್ಬಾಲ್ ಅನ್ಸಾರಿ ರಾಜಕೀಯ ಜೀವನ ಅಂತ್ಯವಾಗುತ್ತಾ?

ಕೊಪ್ಪಳ ಜಿಲ್ಲಾ ಕಾಂಗ್ರೆಸ್ ನಲ್ಲಿ ಎಲ್ಲವೂ ಸರಿ ಇಲ್ಲ ಅನ್ನೋದು ಇಂದಿನಿಂದಲೂ ತಣ್ಣಗೆ ತೋರುತ್ತಿತ್ತು, ಆದರೆ ಈಗ ಬಹಿರಂಗವಾಗಿ ಕಾಣುತ್ತಿದೆ. ಇತ್ತೀಚಿಗೆ ಕೊಪ್ಪಳದಲ್ಲಿ ವಿವಿಧ ಮುಸ್ಲಿಂ ನೇತಾರರ  ಜಯಂತಿಯನ್ನು ಮುಸ್ಲಿಂ ಸಂಘಟನೆಗಳು ಆಚರಣೆ ಮಾಡಿದವು ವೇದಿಕೆಯ ಮೇಲೆ ಕೊಪ್ಪಳ ಜಿಲ್ಲಾ ಕಾಂಗ್ರೆಸ್ನ ಎಲ್ಲಾ ಪದಾಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಇದ್ದರು ಆ ಸಮಯದಲ್ಲಿ ರಾಘವೇಂದ್ರ ಹಿಟ್ನಾಳ್, ರಾಜಶೇಖರ್ ಹಿಟ್ನಾಳ್ ಮತ್ತು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಕೂಡ ಹಾಜರಿದ್ದರು. ವೇದಿಕೆಯಲ್ಲಿಯೇ ಇಕ್ಬಾಲ್ ಅನ್ಸಾರಿ ರಾಘವೇಂದ್ರ ಹಿಟ್ನಾಳ್ ಅವರಿಗೆ ನೇರವಾಗಿ ಟಾರ್ಗೆಟ್ ಮಾಡಿ ಮಾತನಾಡಿದರು, ಅದು ಏನಪ್ಪಾ ಅಂದರೆ "ರಾಘವೇಂದ್ರ ನನ್ನ ಸೋಲಿಗೆ ನೀವೇ ಕಾರಣ ಮುಸ್ಲಿಮರನ್ನು ಉಪಯೋಗ ಮಾಡಿಕೊಳ್ಳುತ್ತೀರಿ ಆದರೆ ಒಂದು ಕಡೆ ಮುಸ್ಲಿಮರನ್ನು ಸೋಲಿಸುತ್ತೀರಿ ಇದು ಎಷ್ಟು ದಿನ ನಡೆಯುತ್ತೆ ನಾವು ನೋಡುತ್ತೇವೆ" ಅಂತ ಇಕ್ಬಾಲ್ ಅನ್ಸಾರಿ ಮಾತನಾಡಿದಾಗ ರಾಘವೇಂದ್ರ ಹಿಟ್ನಾಳ್ ಮುಖದ ಮೇಲೆ ಬರುತ್ತಿದ್ದ ಬೆವರು ಹೊರಿಸಿಕೊಳ್ಳುವಂತಹ ಪರಿಸ್ಥಿತಿ ಉಂಟಾಗಿತ್ತು.

ಇಷ್ಟು ನಿಖರವಾಗಿ ಇಕ್ಬಾಲ್ ಅನ್ಸಾರಿ ಇಟ್ನಾಳ್ ಕುಟುಂಬದ ಮೇಲೆ ಬೊಟ್ಟು ಮಾಡಿ ತೋ-ರಿಸುತ್ತಿರುವುದನ್ನು ನೋಡಿದಾಗ ಇಟ್ನಾಳ್ ಕುಟುಂಬ ಅನ್ಸಾರಿ ಚುನಾವಣೆ ವಿಷಯದಲ್ಲಿ ಸೋಲಿಸುವ ತಂತ್ರವನ್ನು ಉಪಯೋಗ ಮಾಡಿದ್ದರೇ? ಅನ್ನುವ ಮಾತುಗಳು ಕೇಳಿ ಬರುತ್ತಿವೆ, ಕೇವಲ ಅನುಮಾನದ ರೂಪದಲ್ಲಿ ಮಾತ್ರ ಅಲ್ಲದೆ ನಿಖರವಾಗಿ ಕೆಲವು ಕಾಂಗ್ರೆಸ್ ಯುವ ಮತ್ತು ಹಿರಿಯ ಮುಖಂಡರು "ಅನ್ಸಾರಿ ಅವರು ಹೇಳುವುದು ನೂರಕ್ಕೆ ನೂರು ಸತ್ಯ ಹಿಟ್ನಾಳ ಕುಟುಂಬ ಅನ್ಸಾರಿ ಅವರನ್ನು ತುಳಿಯಲು ಚುನಾವಣಾ ಸಮಯದಲ್ಲಿ  ಯಾವ ಯಾವ ಜಾಗದಲ್ಲಿ ಸಭೆಗಳನ್ನು ನಡೆಸಿದರು, ಮತ್ತು ಅಂಕಲಿಮಠದಲ್ಲಿ ಯಾವ ಸಭೆ ನಡೆಯಿತು, ಅನ್ನುವ ವಿಷಯಗಳು ಹೊರಬರುತ್ತಿವೆ,"

ಇಷ್ಟಕ್ಕೂ ಹಿಟ್ನಾಳ್ ಕುಟುಂಬ ಸಭೆಗಳನ್ನು ಮಾಡಿದ್ದಾದರೂ ಎಲ್ಲಿ? ಅಂಕಲಿಮಠದಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಏನು? ಅನ್ನುವುದು ಇನ್ನೂ ಗುಪ್ತವಾಗಿ ಇವೆ, ಆದರೆ ನಾವು ಏನು ಮಾಡಿಯೇ ಇಲ್ಲ ಅಂತ ಹಿಟ್ನಾಳ್ ಕುಟುಂಬ ಈಗಲೂ ಕೂಡ ತೊಡೆತಟ್ಟಿ ಹೇಳುತ್ತಿದೆ, ಮತ್ತು ಕೊಪ್ಪಳದಲ್ಲಿ ಅಲ್ಪಸಂಖ್ಯಾತರಿಗೆ ಒಳ್ಳೆಯ ಸ್ಥಾನಮಾನಗಳನ್ನು ನೀಡುತ್ತಿರುವುದನ್ನು ನೋಡಿದರೆ ಹಿಟ್ನಾಳ್ ಕುಟುಂಬ ಅಲ್ಪಸಂಖ್ಯಾತರು ದೂರ ಆಗುವ ಭಯದಿಂದ ಈ ರೀತಿ ಮಾಡುತ್ತಿದೆ ಎಂದು ಕೊಪ್ಪಳ ಕ್ಷೇತ್ರದಲ್ಲಿ ಜನರ ಬಾಯಲ್ಲಿ ತಣ್ಣಗೆ ಹ-ರಿದಾಡುತ್ತಿದೆ.

## ಇಕ್ಬಾಲ್ ಅನ್ಸಾರಿಗೆ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಮಾತ್ರ ನಾಯಕರು ಉಳಿದವರು ಲೆಕ್ಕಕ್ಕೆ ಇಲ್ಲ

**ಇತ್ತೀಚಿಗೆ ಕೊಪ್ಪಳದಲ್ಲಿ ನಡೆದ ಮುಸ್ಲಿಂ ಸಭೆಯಲ್ಲಿ ಇಕ್ಬಾಲ್ ಅನ್ಸಾರಿ ಸ್ವತಹ ತಾವೇ ಹೇಳಿಕೆ ಕೊಟ್ಟಂತೆ "ನಮಗೆ ಸಿದ್ದರಾಮಯ್ಯ ಮಾತ್ರ ನಾಯಕರು ಅಲ್ಪಸಂಖ್ಯಾತರು ಏನಾದರೂ ಮಾಡಿಕೊಳ್ಳುವುದು ಇದ್ದರೆ ಅವರ ಅವಧಿಯಲ್ಲಿಯೇ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಮಗೆ ತೊಂದರೆ" ಎಂದು ಬಹಿರಂಗವಾಗಿ ಹೇಳಿದ್ದಾರೆ. ಈ ಸಮಯದಲ್ಲಿಯೇ "ಸೋನಿಯಾ ಗಾಂಧಿ ರಾಹುಲ್ ಗಾಂಧಿ ನಮಗೆ ನಾಯಕರಲ್ಲ ಅವರ ಮೇಲೆ ನಂಬಿಕೆ ಕೂಡ ಇಲ್ಲ ಏನಿದ್ದರೂ ಸಿದ್ದರಾಮಯ್ಯನವರೇ ನಮಗೆ ಅಂತಿಮ ಅವರು ರಾಜಕೀಯದಲ್ಲಿ ಸಕ್ರಿಯ ಆಗಿರುವವರೆಗೂ ನಾವು ಸೇಫ್, ನಂತರ ಅಲ್ಪಸಂಖ್ಯಾತರು ತುಂಬಾ ಕಷ್ಟ ಪಡಬೇಕಾಗುತ್ತದೆ," ಅನ್ನುವ ರೀತಿಯಲ್ಲಿ ಮಾತನಾಡಿದ್ದು ಈಗ ಕೊಪ್ಪಳ ಜಿಲ್ಲೆಯ ಕಾಂಗ್ರೆಸ್ ನಲ್ಲಿ ಗಂಭೀರ ವಿಚಾರವಾಗಿ ಕೇಳ ತೊಡಗಿದೆ.**







**ಅನ್ಸಾರಿ ಮಾತು ಖಂಡನೀಯ ಕಾಂಗ್ರೆಸ್ ಸಾಮೂಹಿಕ ನಾಯಕತ್ವದಲ್ಲಿದೆ;, ಎಚ್ ಆರ್ ಶ್ರೀನಾಥ್:** ಇತ್ತೀಚೆಗೆ ಕೊಪ್ಪಳದಲ್ಲಿ ಮಾತನಾಡಿದ ಅನ್ಸಾರಿಯ ದಾಟಿಯನ್ನ ಕಾಂಗ್ರೆಸ್ ಹಿರಿಯ ಮುಖಂಡ ಎಚ್‌ಆರ್ ಶ್ರೀನಾಥ್ ಅವರು ತೀವ್ರವಾಗಿ ಖಂಡಿಸಿದ್ದಾರೆ. ಕೇವಲ ಒಬ್ಬ ವ್ಯಕ್ತಿ ನಮಗೆ ನಾಯಕ ಅಲ್ಲ ಒಬ್ಬ ವ್ಯಕ್ತಿಯನ್ನು ಒಲೈಕೆ ಮಾಡುವುದು ದುರುದ್ದೇಶಪೂರ್ವಕವಾಗಿದೆ, ಕಾಂಗ್ರೆಸ್ ನಲ್ಲಿ ಸಾಮೂಹಿಕ ನಾಯಕತ್ವ ಇದೆ. ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ್, ಡಿಕೆ ಶಿವಕುಮಾರ್, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಅಂತಹ ಅನೇಕ ನಾಯಕರು ಕಾಂಗ್ರೆಸ್ ನಲ್ಲಿ ಇದ್ದಾರೆ, ಎಲ್ಲರೂ ಕಾಂಗ್ರೆಸ್ ಅನ್ನು ಮುನ್ನಡೆಸುತ್ತಿದ್ದಾರೆ, ಕೇವಲ ಸಿದ್ದರಾಮಯ್ಯನವರು ಮಾತ್ರ ಅಲ್ಲ ಅನ್ನುವ ದಾಟಿಯಲ್ಲಿ ಎಚ್ ಆರ್ ಶ್ರೀನಾಥ್ ಇಕ್ಬಾಲ್ ಅನ್ಸಾರಿ ಅವರಿಗೆ ಟಾಂಗ್ ನೀಡಿದ್ದಾರೆ,

**ಅನ್ಸಾರಿ ಮತ್ತು ಹಿಟ್ನಾಳ ಕುಟುಂಬದ ನಡುವೆ ಮುನಿಸು ಜಿಲ್ಲಾ ಕಾಂಗ್ರೆಸ್ ನಲ್ಲಿ ಹೊಲಸು:** ಇಕ್ಬಾಲ್ ಅನ್ಸಾರಿ ಮತ್ತು ಹಿಟ್ನಾಳ ಕುಟುಂಬದ ನಡುವೆ ಸಾಕಷ್ಟು ವೈರುಧ್ಯಗಳು ಇವೆ ಅನ್ನೋದು ಇತ್ತೀಚಿನ ಬೆಳವಣಿಗೆಗಳಿಂದ ಗೊತ್ತಾಗುತ್ತಿದೆ ಕೆಲವು ಪ್ರಮುಖ ಕಾರ್ಯಕರ್ತರನ್ನು ಮಾತನಾಡಿಸಿದಾಗ ಇಕ್ಬಾಲ್ ಅನ್ಸಾರಿ ಅವರಿಗೆ ವಿಧಾನಸಭಾ ಚುನಾವಣೆಯಲ್ಲಿ ಹಿಟ್ನಾಳ್ ಕುಟುಂಬ ಸಾತ್ ನೀಡಿಲ್ಲ ಬದಲಾಗಿ ವಿರುದ್ಧ ಮತದಾನಕ್ಕೆ ಪ್ರೋತ್ಸಾಹ ನೀಡಿದ್ದಾರೆ ಅನ್ನುವ ಗುಮಾನೀಯನ್ನು ಪ್ರಮುಖ ಕಾರ್ಯಕರ್ತರೇ ವ್ಯಕ್ತಪಡಿಸುತ್ತಿದ್ದಾರೆ, ಇತ್ತ ಇಕ್ಬಾಲ್ ಅನ್ಸಾರಿ ಅವರು ನೇರವಾಗಿ ಕೊಪ್ಪಳದ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ಬೊಟ್ಟು ಮಾಡಿ ನೀವೇ ನನ್ನನ್ನು ಸೋಲಿಸಿದ್ದೀರಿ ನೀವು ಯಾವ ಯಾವ ಜಾಗದಲ್ಲಿ ಏನು ಏನು ಸಭೆ ಮಾಡಿದ್ದೀರಿ ಅನ್ನುವ ಪರಿಪೂರ್ಣ ಮಾಹಿತಿ ನನಗಿದೆ ಮುಂದೆ ನಾನು ನೋಡಿಕೊಳ್ಳುತ್ತೇನೆ ಅನ್ನುವ ರೀತಿಯಲ್ಲಿ ತೊಡೆ ತಟ್ಟುವ ಅನ್ಸಾರಿ ಮುಂದೆ ಇಟ್ನಾಳ್ ಕುಟುಂಬವನ್ನು ಎದುರು ಹಾಕಿಕೊಳ್ಳುವ ಧೈರ್ಯ ಮಾಡುತ್ತಾರ? ಅನ್ನುವ ಪ್ರಶ್ನೆ ಮೂಡುತ್ತದೆ.ಯಾಕೆಂದರೆ ಅನ್ಸಾರಿಗೆ ಗೆಲ್ಲಲು ಬೇಕಾಗಿರುವ ಮತಗಳೇ ಹಿಟ್ನಾಳ್ ಕುಟುಂಬದ ಕೈಯಲ್ಲಿರುವುದು ಒಂದು ವೇಳೆ ಹಿಟ್ನಾಳ ಕುಟುಂಬಕ್ಕೆ ಇಕ್ಬಾಲ್ ಅನ್ಸಾರಿ ಇದೇ ರೀತಿ ಆರೋಪ ಮಾಡುತ್ತಾ ಹೋದರೆ ಇಕ್ಬಾಲ್ ಅನ್ಸಾರಿ ಚುನಾವಣಾ ರಾಜಕೀಯದಲ್ಲಿ ಸಾಕಷ್ಟು ನಷ್ಟ ಅನುಭವಿಸಿದರು ಆಶ್ಚರ್ಯವೇನಿಲ್ಲ. ಇತ್ತ ಕೊಪ್ಪಳ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ನಲ್ಲಿ ಭುಗಿಲೆದ್ದಿರುವ ಈ ಹೊಲಸು ರಾಜಕಾರಣದಿಂದ ಬೇಸತ್ತು ಹೋಗಿದ್ದಾರೆ. ಯಾವ ಗುಂಪಿನ ಕಡೆ ಇದ್ದರೆ ಕಾಂಗ್ರೆಸ್ ಸೇಫ್ ಅನ್ನುವ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಆಲೋಚನೆ ಮಾಡುವಂತಹ ಪರಿಸ್ಥಿತಿ ಉಂಟಾಗಿದೆ, ಕಾಂಗ್ರೆಸ್ ನಲ್ಲಿ ನಾಲ್ಕೈದು ಬಣಗಳಾಗಿ ಕೊಪ್ಪಳ ಕಾಂಗ್ರೆಸ್ ಹೊಲಸು ಎದ್ದು ಹೋಗಿದೆ ಅಂತಾನೆ ಹೇಳಬಹುದು.

## ಸಂಪಾದಕೀಯ



ಜಿ ಬಿ ನ್ಯೂಸ್ ಕನ್ನಡ
ಸಂಪಾದಕರು:
ಗೋವಿಂದರಾಜ್ ಬೂದಗುಂಪಾ

# ಹಿಂದೂ ಧರ್ಮದ ಒಳನೋಟ



ಹಿಂದೂ ಧರ್ಮ ತತ್ವಶಾಸ್ತ್ರವು ಮನುಷ್ಯನು ಐದು ಸ್ವಭಾವಗಳ ಪೊರೆಯಿಂದ ಸುತ್ತುವರೆದಿರುವ ವಸ್ತುವಾಗಿದೆ ಎಂದು ಹೇಳುತ್ತದೆ. ಅವನ ಸುತ್ತಲೂ ಜೀವಂತ ಶಕ್ತಿಯ ಸೆಳವು ಇದೆ, ಅದು ಅವನ ಸುತ್ತಲಿನ ಎಲ್ಲವನ್ನೂ ವ್ಯಾಪಿಸುತ್ತದೆ. ಈ ಆಧ್ಯಾತ್ಮಿಕ ಸೆಳವು ಮನುಷ್ಯನಿಗೆ ಆತ್ಮ ಪ್ರಪಂಚದ ಗ್ರಹಿಕೆ ಮತ್ತು ಎಲ್ಲಾ ವಸ್ತುಗಳು ಮತ್ತು ಎಲ್ಲರೊಂದಿಗೆ ಏಕತೆಯ ಅಪಾರ ಭಾವನೆಯನ್ನು ನೀಡುತ್ತದೆ.

ಹಿಂದೂ ಧರ್ಮವು ದೇವರ ಪರಿಕಲ್ಪನೆಗಳು ಅಥವಾ ಗುಣಲಕ್ಷಣಗಳನ್ನು ಆರಾಧಿಸುವುದನ್ನು ನಂಬುತ್ತದೆ, ನಿರ್ದಿಷ್ಟವಾಗಿ ಹಿಂದೂ ದೇವರ ಪರಿಕಲ್ಪನೆಯನ್ನು 'ಬ್ರಹ್ಮ' ಎಂದು ಕರೆಯಲಾಗುತ್ತದೆ. ದತ್ತಾಂಶವು ಮನಸ್ಸಿಗೆ ಮೀ-ರಿದ ಅಥವಾ 'ಇದ್ರು' ಮತ್ತು ಎಲ್ಲಾ ಭೌತಿಕ ಸೃಷ್ಟಿಗೆ ಮೀರಿದ ಶಾಶ್ವತ ವ್ಯಕ್ತಿಯನ್ನು ಸೂಚಿಸುತ್ತದೆ. ಇದನ್ನು ಸಾಮಾನ್ಯವಾಗಿ 'ಶಿವ' ಅಥವಾ 'ಸಾಧನಾ' ಎಂದು ಕರೆಯಲಾಗುತ್ತದೆ ಮತ್ತು ಅಸ್ತಿತ್ವದ ಸ್ವರೂಪವನ್ನು ಆಧಾರವಾಗಿರುವ ಶುದ್ಧ ಸ್ವಯಂ ಅಥವಾ ಚೈತನ್ಯವನ್ನು ಪ್ರತಿನಿಧಿಸುತ್ತದೆ. ಹಿಂದೂ ಧರ್ಮದಲ್ಲಿ ವೈಯಕ್ತಿಕ ಸ್ವ-ಬಹುಮುಖತೆಯಿಂದ ಹಿಡಿದು ವೈಯಕ್ತಿಕ ಮತ್ತು ಸಾಮಾಜಿಕ ಒಳ್ಳೆಯತನ ಮತ್ತು ಕರ್ತವ್ಯದವರೆಗಿನ ವೈಯಕ್ತಿಕ ಸ್ವಭಾವದ ಬಗ್ಗೆ ಹಲವಾರು ಆಸಕ್ತಿದಾಯಕ ಅಭಿಪ್ರಾಯಗಳಿವೆ.

ಹಿಂದೂ ಆತ್ಮವು ವಿಶ್ವದಲ್ಲಿ ಜೀವಿಗಳ ಶ್ರೇಣಿಯನ್ನು ಹೊಂದಿದೆ ಎಂದು ಹೇಳುತ್ತದೆ. ಕೆಳ ಹಂತವು 'ಧುರಾ' ಅಥವಾ ಬ್ರಹ್ಮಾಂಡದ ಕೆಳ ಪ್ರಾಣಿಗಳಾದ ಮೀನು, ದನ ಮತ್ತು ಕೀಟಗಳಿಂದ ಆಕ್ರಮಿಸಲ್ಪಟ್ಟಿದೆ. ಮೇಲ್ಭಾಗದಲ್ಲಿ ಹೆಚ್ಚಿನ ಮಟ್ಟದಲ್ಲಿ 'ಬ್ರಹ್ಮನ್' ಅಥವಾ ಅಮರ ಆತ್ಮವು ಕೆಳಮಟ್ಟದ ಆಳ್ವಿಕೆ ನಡೆಸುತ್ತದೆ ಮತ್ತು ಬ್ರಹ್ಮಾಂಡದ ಸೃಷ್ಟಿಗೆ ಕಾರಣವಾಗಿದೆ. ಹಿಂದೂ ಧರ್ಮವು ಇದನ್ನು ಇಡೀ ವಿಶ್ವವನ್ನು ಸೃಷ್ಟಿಸಿದ ಮಹಾನ್ ಸೃಷ್ಟಿಕರ್ತನಾಗಿ ನೋಡುತ್ತದೆ. ಆದರೆ, ಈ 'ಬ್ರಹ್ಮ' ದೇವರು ಅಥವಾ ದೇವರ ರೀತಿಯ ಜೀವಿ ಅಲ್ಲ ಆದರೆ ಹಿಂದೂಗಳಿಂದ ದೇವರಾಗಿ ಪೂಜಿಸಲ್ಪಡುವ ಶ್ರೇಷ್ಠ ಜೀವಿ.

ಹಿಂದೂ ದೇವರುಗಳನ್ನು ಸಾಮಾನ್ಯವಾಗಿ ಸರ್ವಶಕ್ತ 'ಪ್ರಾಣ' ಅಥವಾ ಭಕ್ತನೊಳಗಿನ ಜೀವಶಕ್ತಿಯ ಒಂದು ಅಂಶವಾಗಿ ಪೂಜಿಸಲಾಗುತ್ತದೆ. ಅವುಗಳನ್ನು ಅರ್ಧ ಮಾನವ ಮತ್ತು ಅರ್ಧ ದೈವಿಕ ಎಂದು ಚಿತ್ರಿಸಲಾಗಿದೆ, ಇವೆರಡೂ ಬೃಹತ್ ತ್ರಿವಳಿ ಪ್ರಜ್ಞೆಯ ಭಾಗವಾಗಿದ್ದು ಅದು ಬ್ರಹ್ಮಾಂಡದ ಸ್ವರೂಪವಾಗಿದೆ. ಪರಮಾತ್ಮನ ಈ ಮೂರು ದೈವಿಕ ವ್ಯಕ್ತಿಗಳ ಹಿಂದೂ ಪೂಜೆಯು ಕರ್ಮದ ಪರಿಕಲ್ಪನೆಯನ್ನು ಒಳಗೊಂಡಿದೆ, ಇದು ಜೀವನದಲ್ಲಿ ಒಬ್ಬರು ಅನುಭವಿಸಿದ ಪರಿಣಾಮಗಳಿಗೆ ಸಂಬಂಧಿಸಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಧರ್ಮ ಮತ್ತು ಮೂರು ವರ್ಗದ ಜೀವಿಗಳ ಪ್ರಕಾರ ಜಗತ್ತಿನಲ್ಲಿ ಸೃಷ್ಟಿ ಮತ್ತು ವಿನಾಶದ ಎಲ್ಲಾ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಸರ್ವವ್ಯಾಪಿ ಶಕ್ತಿಯಾಗಿ ಹಿಂದೂ ಧರ್ಮವು "ಭಗವಂತ" ಎಂಬ ಅಸ್ತಿತ್ವವನ್ನು ಪೂಜಿಸುತ್ತದೆ.

ಕರ್ಮದ ಪರಿಕಲ್ಪನೆಯು ಆತ್ಮದ ಪರಿಕಲ್ಪನೆಗಳೊಂದಿಗೆ ನಿಕಟ ಸಂಬಂಧ ಹೊಂದಿದೆ, ಇದು ಒಬ್ಬ ವ್ಯಕ್ತಿಯ ಆತ್ಮವನ್ನು ಶಾಶ್ವತವಾಗಿ ಅಸ್ತಿತ್ವದಲ್ಲಿದೆ ಮತ್ತು ನಿರ್ದಿಷ್ಟ ವ್ಯಕ್ತಿಯ ದೇಹ ಮತ್ತು ಮನಸ್ಸಿನಿಂದ



ಸ್ವತಂತ್ರವಾಗಿರುತ್ತದೆ. ಆತ್ಮವು ವೈಯಕ್ತಿಕ ಆತ್ಮದ ಅತ್ಯಂತ ಅವಶ್ಯಕ ಅಂಶವೆಂದು ನಂಬಲಾಗಿದೆ ಮತ್ತು ಅದೇ ಸಮಯದಲ್ಲಿ ಅದು ಅಸ್ಪಷ್ಟವಾಗಿರುವುದರಿಂದ ಭೌತಿ-ಕ ವಿಧಾನಗಳಿಂದ ವ್ಯಾಖ್ಯಾನಿಸಲಾಗುವುದಿಲ್ಲ. ಇದನ್ನು ಮಾನವ ಇಂದ್ರಿಯಗಳಿಂದ ಬಂಧಿಸಲು ಸಾಧ್ಯವಿಲ್ಲ ಮತ್ತು ಈ ಭೌತಿಕ ಜಗತ್ತಿನಲ್ಲಿ ನಾವು ಅನುಭವಿಸುವ ಸಂಪೂರ್ಣ ವಾಸ್ತವದ ಮೂಲ ತಲಾಧಾರವೆಂದು ನಂಬಲಾಗಿದೆ. ಕರ್ಮದ ಸಂಬಂಧಿತ ಪರಿಕಲ್ಪನೆಯಲ್ಲಿ ಪ್ರಾಣಿಗಳ ಆತ್ಮಗಳು ಪುರುಷ ಅಥವಾ ಮಹಿಳೆಯಂತೆ ಪ್ರಾಣಿ ರೂಪಕ್ಕೆ ಬದಲಾಗದೆ ಶಾಶ್ವತವಾಗಿ ಅಸ್ತಿತ್ವದಲ್ಲಿವೆ ಎಂದು ನಂಬಲಾಗಿದೆ. ಈ ಪರಿಕಲ್ಪನೆಯಲ್ಲಿ ಮಾನವ ಮತ್ತು ಪ್ರಾಣಿ ಆತ್ಮಗಳ ನಡುವೆ ಯಾವುದೇ ವ್ಯತ್ಯಾಸಗಳಿಲ್ಲ, ಏಕೆಂದರೆ ಎರಡನ್ನೂ ಪ್ರತ್ಯೇಕ ಘಟಕಗಳೆಂದು ಪರಿಗಣಿಸಲಾಗುತ್ತದೆ.

ಸರ್ವವ್ಯಾಪಿ ದೇವರ ಕಲ್ಪನೆಯು ಕರ್ಮದ ಕಲ್ಪನೆಯನ್ನು ಆಧರಿಸಿದೆ. ಈ ಪರಿಕಲ್ಪನೆಯ ಪ್ರಕಾರ, ನೈಸರ್ಗಿಕ ಮರಣದಿಂದ ಸಾಯುವ ಎಲ್ಲರ ಆತ್ಮಗಳು ಶಾಂತಿಯಿಂದ ವಿಶ್ರಾಂತಿ ಪಡೆಯುವುದಿಲ್ಲ, ಬದಲಾಗಿ ಅವರ ಅಪರಾಧಗಳಿಂದಾಗಿ ಅವರು ಹಿಂಸೆ ಅನುಭವಿಸುವ ನರಕಗಳೆಂದು ಕರೆಯಲ್ಪಡುವ ಕ್ಷೇತ್ರಕ್ಕೆ ಹೋಗುತ್ತಾರೆ. ಅವರ ಮರಣದ ನಂತರ ಹಿಂದೂ ಸಂಪ್ರದಾಯದಲ್ಲಿ ಮತ್ತೆ ಜನಿಸಿದವರು ಹಿಂದಿನ ಅಧಿಕಾರವನ್ನು ಹೊಂದಿದ್ದಾರೆಂದು ನಂಬಲಾಗಿದೆ, ಅದು ಹಿಂದಿನ ಪಾಪಗಳನ್ನು ಸರಿಪಡಿಸಲು ಸಮರ್ಥವಾಗಿದೆ. ಹಿಂದೂ ಧರ್ಮದಲ್ಲಿ ಪುನರ್ಜನ್ಮದ ಈ ಪರಿಕಲ್ಪನೆಯು ಧರ್ಮದ ಒಂದು ಪ್ರಮುಖ ಅಂಶವಾಗಿದೆ ಮತ್ತು ಹೆಚ್ಚಿನ ಹಿಂದೂಗಳು ಹಿಂದೂ ಧರ್ಮವನ್ನು ಅತ್ಯಂತ ನೀತಿವಂತ ಧರ್ಮವೆಂದು ಏಕೆ ಪರಿಗಣಿಸುತ್ತಾರೆ ಎಂಬುದಕ್ಕೆ ಇದು ಒಂದು ಮುಖ್ಯ ಕಾರಣವಾಗಿದೆ. ಹಿಂದೂ ನಂಬಿಕೆಯಲ್ಲಿ ಮೂಲಭೂತ ತತ್ವವಾಗಿ ಪುನರ್ಜನ್ಮದ ಪ್ರಾಮುಖ್ಯತೆಯೇ ಇತರ ಧರ್ಮಗಳಿಗೆ ಹೋಲಿಸಿದರೆ ಅದನ್ನು ಅನನ್ಯಗೊಳಿಸುತ್ತದೆ.

ಹಿಂದೂ ಧರ್ಮದ ಮತ್ತೊಂದು ಪ್ರಮುಖ ಪರಿಕಲ್ಪನೆಯೆಂದರೆ ಸೃಷ್ಟಿಕರ್ತ ದೇವರು ಬ್ರಹ್ಮ. ಬಹುಪಾಲು ಹಿಂದೂ ಕುಟುಂಬಗಳು ಭಕ್ತಿ ಎಂದು ಕರೆಯಲ್ಪಡುವ ಒಂದು ಆಚ-'ರಣೆಯನ್ನು ಅನುಸರಿಸುತ್ತಾರೆ ಮತ್ತು ಈ ಆಚರಣೆಗಳು ಅವರು ಜೀವನದಲ್ಲಿ ಸಮೃದ್ಧಿಯನ್ನು ಸಾಧಿಸುವ ಸಾಧನವೆಂದು ಅವರು ನಂಬುತ್ತಾರೆ. ಈ ಆಚರಣೆಗಳಲ್ಲಿ ಹೆಚ್ಚಿನವು ಹಸು ಮತ್ತು ಚರ್ಚಿಸಿದ ಪುಸ್ತಕಗಳಂತಹ ದೇವರುಗಳೊಂದಿಗೆ ಸಂಬಂಧ ಹೊಂದಿವೆ ಎಂದು ಪರಿಗಣಿಸಲಾದ ವಿವಿಧ ರೀತಿಯ ವಸ್ತುಗಳನ್ನು ಪೂಜಿಸುವುದರ ಮೇಲೆ ಕೇಂದ್ರೀಕ-ರಿಸುತ್ತವೆ. ಸಮಾರಂಭದ ಕೆಲವು ಪ್ರಮುಖ ಭಾಗಗಳಲ್ಲಿ ಸ್ತುತಿಗೀತೆ, ಧ್ಯಾನ ಮತ್ತು ನೃತ್ಯ ಸೇರಿವೆ. 'ಮೋಕ್ಷ' ಎಂಬ ಅಸ್ತಿತ್ವದ ಉದ್ದೇಶವನ್ನು ವ್ಯಾಖ್ಯಾನಿಸುವ ಗಣೇಶನ ಹೇಳಿಕೆಯ ವಿಭಿನ್ನ ಆವೃತ್ತಿಗಳಿವೆ; ಅಂತಿಮ ಆನಂದದಾಯಕ ಸ್ಥಿತಿ.

ಹಿಂದೂ ಧರ್ಮದ ಇನ್ನೊಂದು ಪ್ರಮುಖ ಅಂಶವೆಂದರೆ ಕರ್ಮ, ಇದು ಯಮಗಳ ಪರಿಕಲ್ಪನೆ ಮತ್ತು ಸಸ್ಯಾಹಾರದ ಅಭ್ಯಾಸವನ್ನು ಒಳಗೊಂಡಿರುತ್ತದೆ. ಹಿಂದೂ ಸಮುದಾಯದ ಕೆಲವು ವಿಭಾಗಗಳು ತಮಸ್ ಮತ್ತು ಪುರಾಣಗಳ ಪರಿಕಲ್ಪನೆಯನ್ನು ಅನುಸರಿಸುತ್ತವೆ. ಈ ಎರಡು ಪರಿಕಲ್ಪನೆಗಳ ಅನುಯಾಯಿಗಳು ಮಾಂಸವನ್ನು ತಿನ್ನುವುದು ಕೆಟ್ಟ ಆರೋಗ್ಯಕ್ಕೆ ಕಾರಣವಾಗುತ್ತದೆ ಮತ್ತು ಪೈಶಾಚಿಕ ಆಚರಣೆಗಳಿಗೆ ಕಾರಣವಾಗುತ್ತದೆ ಎಂದು ನಂಬುತ್ತಾರೆ. ಮತ್ತೊಂದೆಡೆ, ಕಾಮ ಪರಿಕಲ್ಪನೆಯ ಅನುಯಾಯಿಗಳು ಮಾಂಸವನ್ನು ದೇವರ ಆರಾಧನಾ ಪೂಜೆಯ ಪವಿತ್ರ ಭಾಗವೆಂದು ಪರಿಗಣಿಸುತ್ತಾರೆ ಮತ್ತು ಅವರು ತಮ್ಮ ಧಾರ್ಮಿಕ ನಂಬಿಕೆಗಳಿಗೆ ಅನುಗುಣವಾಗಿ ಅದನ್ನು ತಿನ್ನುತ್ತಾರೆ.

# ಬೂದಗುಂಪಾದಲ್ಲಿ ದಲಿತರ ಸ್ಮಶಾನ ಅಕ್ರಮ ಒತ್ತುವರಿ; ಸಂಘರ್ಷಕ್ಕೂ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಿ



**"ನಮ್ಮ ಸಮುದಾಯದ ಸ್ಮಶಾನರ ಜಾಗವನ್ನು ಸಂಪೂರ್ಣ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ, ನಮ್ಮ ಸಮುದಾಯದಲ್ಲಿ ಯಾರಾದರೂ ಮರಣ ಹೊಂದಿದರೆ ಅವರನ್ನು ಊಳಲು ನಮಗೆ ಜಾಗವಿಲ್ಲ ನಮ್ಮ ಮನೆಯ ಮುಂದೆ ಊಳಬೇಕು ಇಲ್ಲದಿದ್ದರೆ ಗ್ರಾಮ ಪಂಚಾಯಿತಿಯ ಮುಂದೆ ಊಳಬೇಕು ಅಂತಹ ಪರಿಸ್ಥಿತಿ ನಮಗೆ ಬಂದೊದಗಿದೆ ಕೂಡಲೇ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಗ್ರಾಮ ಪಂಚಾಯತ್ ಮತ್ತು ಸರ್ಕಾರಿ ಕಟ್ಟಡಗಳ ಮುಂದೆ ನಮ್ಮ ಸಮುದಾಯದ ಶವಗಳನ್ನು ಊಳಬೇಕಾಗುತ್ತದೆ"**

**ಫಕೀರಪ್ಪ ಹರಿಜನ**
**ಡಿಎಸ್‌ಎಸ್ ಮುಖಂಡರ ಬೂದಗುಂಪಾ**

ಕೊಪ್ಪಳ ತಾಲೂಕಿನ ಬೂದಗುಂಪ ಗ್ರಾಮದಲ್ಲಿ ದಲಿತರ ಸಮಾಸಾನವನ್ನು ಪಕ್ಕದ ಜಮೀನಿನವರು ಒತ್ತುವರಿ ಮಾಡುತ್ತಿದ್ದಾರೆ ಎಂದು ದಲಿತ ಮುಖಂಡ ಪಕೀರಪ್ಪ ದೊಡ್ಡಮನಿ ಆರೋಪಿಸಿದ್ದಾರೆ.

ಶತಮಾನಗಳಿಂದಲೂ ದಲಿತರು ಸಮುದಾಯದ ಶವಗಳನ್ನು ಊಳಲು ಪ್ರತ್ಯೇಕ ಸ್ಮಶಾನವನ್ನು ಸರ್ಕಾರದಿಂದ ಸರ್ವೆ ನಂಬರ್ 27ರಲ್ಲಿ 1 ಎಕ್ಕರೆ 33 ಗುಂಟೆ ಜಾಗವನ್ನು ಪಡೆದುಕೊಂಡಿದ್ದಾರೆ, ಅಕ್ರಮ ಒತ್ತುವರಿಯ ಪರಿಣಾಮವಾಗಿ ಅರ್ಧ ಎಕರೆ ಕೂಡ ದಲಿತರಿಗೆ ಸ್ಮಶಾನ ಉಳಿದಿಲ್ಲ. ಸಂಬಂಧಿಸಿದ ಅಧಿಕಾರಿಗಳಿಗೆ ದಲಿತ ಸಂಘಟನೆಗಳು 2018 ರಿಂದ ಮನವಿ ಮಾಡಿಕೊಂಡು ಬಂದಿದ್ದರು ಕೂಡ ಇದುವರೆಗೂ ಯಾವ ಅಧಿಕಾರಿಗಳು ಜಾಗಕ್ಕೆ ಭೇಟಿ ನೀಡಿಲ್ಲ ಮತ್ತು ದಲಿತ-ರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಕೆಲಸ ಮಾಡಿಲ್ಲ ಇದರ ಪರಿಣಾಮವಾಗಿ ಇಡೀ ಸ್ಮಶಾನವನ್ನೇ ಅಕ್ರಮವಾಗಿ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ, ಈ ಸಂಗತಿ ತುಂಬಾ ಸೂಕ್ಷ್ಮ ವಿಷಯವಾಗಿ ಮಾರ್ಪಾಡಾಗುತ್ತಿದೆ ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಕ್ರಮ ಕೈಗೊಳ್ಳದೆ ಹೋದರೆ ಬೂದಗುಂಪ ಗ್ರಾಮದಲ್ಲಿ ಸಂಘರ್ಷ ಉಂಟಾಗುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ ಒಂದು ವೇಳೆ ಬೂದಗುಂಪಾದಲ್ಲಿ ಈ ರೀತಿಯ ವಾತಾವರಣ ನಿರ್ಮಾಣವಾದರೆ ಅದಕ್ಕೆ ಅಧಿಕಾರಿಗಳೇ ಜವಾಬ್ದಾರಿ ಆಗುತ್ತಾರೆ ಎಂದು ದಲಿತ ಸಂಘರ್ಷ ಸಮಿತಿಯ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಬೂದಗುಂಪ ಗ್ರಾಮಕ್ಕೆ ಆಗಮಿಸಿ ದಲಿತ ಜನಾಂಗಕ್ಕೆ ಮೀಸಲಾಗಿರುವ ಸ್ಮಶಾನವನ್ನು ಒತ್ತುವರಿ ಮಾಡಿಕೊಂಡವರಿಂದ ಬಿಡಿಸಿಕೊಡಬೇಕು ಗ್ರಾಮದೊಳಗೆ ಸಂಘರ್ಷ ಆಗುವುದನ್ನು ತಪ್ಪಿಸಬೇಕು ಅನ್ನುವದು ದಲಿತ ಜನಾಂಗದ ಒತ್ತಾಯ.

# ಕೊಪ್ಪಳದ ಕಿನ್ನಾಳ ರಾಜ್ ಕನ್ನಡ ಚಿತ್ರರಂಗದ ಹೊಸ ಮಾಣಿಕ್ಯ ಎಂದು ತೋರಿಸಿಕೊಟ್ಟ "ಸಿಂಹ ರೂಪಿಣಿ"



ಭಕ್ತಿಪ್ರಧಾನ ಚಿತ್ರ ಎಂದ ಮೇಲೆ ಅಲ್ಲಿ ದೇವರ ಶಕ್ತಿ, ದುಷ್ಟರನ್ನು ಸಂಹರಿಸಿ ಭಕ್ತರನ್ನು ರಕ್ಷಿಸುವ ರೀತಿ, ಕಷ್ಟ ಎಂದು ಬಂದವರ ಕೈ ಹಿಡಿಯುವ ಮಾರ್ಗಗಳು ಇರುತ್ತವೆ. ಈ ವಾರ ತೆರೆಕಂಡಿರುವ "ಸಿಂಹರೂಪಿಣಿ' ಕೂಡಾ ಇಂತಹ ಅಂಶಗಳೊಂದಿಗೆ ಮೂಡಿಬಂದಿದೆ. ಇಲ್ಲಿ ರಾಕ್ಷಸರನ್ನು ಸಂಹಾರ ಮಾಡಲು ಪಾರ್ವತಿದೇವಿ ಏಳು ಅವತಾರಗಳಲ್ಲಿ ಬರುತ್ತಾಳೆ. ಅದರಲ್ಲಿ ಕೆಣಟಿಜಜಜಿುಟಿಜಜನೆಯ ಅವತಾರ ಮಾರಮ್ಮ ದೇವಿ. ಇಂತಹ ಮಾರಮ್ಮ ದೇವಿ ಮಾರಮ್ಮ ಯರಪ್ಪನ ಹಳ್ಳಿಗೆ ಬರಲು ಕಾರಣವೇನು ಸೇರಿದಂತೆ ಹಲವು ಕುತೂಹಲಕರ ಅಂಶಗಳೊಂದಿಗೆ ಈ ಸಿನಿಮಾವನ್ನು ಕಟ್ಟಿಕೊಟ್ಟಿದ್ದಾರೆ.

ಭಕ್ತಿಪ್ರಧಾನ ಚಿತ್ರವಾದರೂ ಇಲ್ಲೊಂದು ಲವ್ ಸ್ಟೋರಿಯೂ ಇದೆ. ಆದರೆ ಅದು ಸಿನಿಮಾದಿಂದ ಹೊರತಾಗಿ ಕಾಣುವುದಿಲ್ಲ. ಪ್ರೀತಿ ಸನ್ನಿವೇಶಗಳು ಇದ್ದರೂ, ಇಬ್ಬರನ್ನು ದೇವಿಯ ಭಕ್ತರೆಂದು ಬಿಂಬಿಸಲಾಗಿದೆ. ಚಿತ್ರದಲ್ಲಿ ಊರ ಗೌಡನ ಸಂಚು, ದೇವಿಯ ಶಕ್ತಿಯನ್ನು ಮನಮುಟ್ಟುವಂತೆ ಕಟ್ಟಿಕೊಡಲಾಗಿದೆ.

ಈ ಚಿತ್ರದ ಯಶಸ್ಸಿಗೆ ಮೂಲ ಕಾರಣ ಕಿನ್ನಾಳ್ ರಾಜ್ ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದು, ಅಚ್ಚುಕಟ್ಟಾಗಿ ಸಿನಿಮಾ ಕಟ್ಟಿಕೆಣಟಿಜಜಜಿುಟಿಜಜಡಲು ಪ್ರಯತ್ನಿಸಿದ್ದಾರೆ. ನಾಯಕಿಯಾಗಿ ಅಂಕಿತಾ ಗೌಡ ನಟಿಸಿದ್ದಾರೆ. ಮಾರಮ್ಮ ದೇವಿಯಾಗಿ ಯಶಸ್ವಿನಿ ಸುಬ್ಬೆಗೌಡ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಉಳಿದಂತೆ ಸುಮನ್, ಹರೀಶ್, ವಿಜಯ್ ಚೆಡೂರು, ತಬಲ ನಾಣಿ, ದಿವ್ಯಾಆಲೂರು, ಸಾಗರ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಭಕ್ತಿಪ್ರಧಾನ ಚಿತ್ರಗಳ ವೈಭವವನ್ನು ತೆರಮೇಲೆ ನೋಡಬಯಸುವವರು ಸಿಂಹರೂಪಿಣಿಯತ್ತ ಮುಖ ಮಾಡಬಹುದು.






# ಮೆಡಿಕಲ್ ಶಾಪ್ ಲೈಸೆನ್ಸ್ ಪಡೆಯಲು ರೂ.50,000/- ಲಂಚ ಕೊಟ್ಟರೆ ಯಾವ ನಿಬಂಧನೆಗಳು ಬೇಡ ಸಲೀಸಾಗಿ ಸಿಗುತ್ತೆ ಪರವಾನಿಗೆ



ಮೆಡಿಕಲ್ ಸ್ಟೋರ್ಸ್ ಅಥವಾ ಮೆಡಿಕಲ್ ಹೋಲ್ ಸೇಲ್ ಆರಂಭಿಸಲು, ಬೇಕಾದ ಔಷಧ ಮಾರಾಟ ಪರವಾನಿಗೆ ಪಡೆಯಲು, ಈಗ ರೂ.50 ಸಾವಿರ ಲಂಚ ಪಾವತಿಸಬೇಕಾದ ಅನಿವಾರ್ಯತೆ ಉಂಟಾಗಿದೆ. ರೂ.20,000/- ಕ್ಕೆ ಮಾತ್ರ ಸಿಮೀತವಾಗಿದ್ದ ಈ ಲಂಚದ ಹಣ 75% ಹೆಚ್ಚಾಗಿದ್ದರಿಂದ ಹೊಸ ಪರವಾನಿಗೆ ಪಡೆಯುವವರು ಗೋಳಾಡುತ್ತಿದ್ದಾರೆ.ರೂ.50 ಸಾವಿರ ಲಂಚ ಪಾವತಿಸಿದರೆ,ಯಾವ ಕಟ್ಟಳೆಗಳು ಇಲ್ಲದೆ ಆಯಾ ವೃತ್ತದ ಸಹಾಯಕ ಔಷಧ ನಿಯಂತ್ರಕರು ದಿಢೀರ್ ಆಗಿ ಲೈಸೆನ್ಸ್ ಕೊಡುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ.



ರೂ.50 ಸಾವಿರ ಪಾವತಿಸುವ ಜೊತೆಗೆ ಅಧಿಕಾ-ರಿಗಳ ಟ್ಯಾಕ್ಸಿ ಬಾಡಿಗೆಯನ್ನು ಸಹ ಅರ್ಜಿದಾರರು ಪಾವತಿಸಬೇಕು.ಲೋಕಾಯುಕ್ತ ಅಧಿಕಾರಿಗಳಿಂದ ಟ್ರ್ಯಾಪ್ ಆದ ಅಧಿಕಾರಿಗಳಿಂದಲೇ ಈ ದರ ಜಾಸ್ತಿಯಾಗಿರುವುದು.

ನೌಕರಿಯಿಂದ ವಜಾ ಮಾಡಲು ಉಪ ಲೋಕಾಯುಕ್ತದಿಂದ ಸರಕಾರಕ್ಕೆ ಶಿಫ□□ರಸ್ಸು ಆದ ಅಧಿಕಾರಿಗಳಿಂದಲೇ ಈ ದಂಧೆ ನಡೆದಿದೆ.ಹೇಗೂ ನೌಕರಿ ಹೋಗುತ್ತದೆ.ಹೇಗಾದರೂ ಮಾಡಿ,ಹಣ ಬಳಿದುಕೊಂಡು ಮನೆಗೆ ಹೋಗಬೇಕು ಎಂದು ಇಂತಹ ಅಧಿಕಾರಿಗಳು ಮಾನಸಿಕವಾಗಿ ಸಿದ್ದರಾಗಿ ಬಿಟ್ಟಿದ್ದಾರೆ.

ನೌಕರಿಯಿಂದ ವಜಾಗೊಳಿಸಲು,ಲೋಕಾಯುಕ್ತರು ಆದೇಶಿಸಿದ ನಂತರವೂ ಸರಕಾರ ವರ್ಷಾನುಗಟ್ಟಲೇ ಆರೋಪಿತ ಅಧಿಕಾರಿಗಳನ್ನು ಕಾರ್ಯನಿರ್ವಹಿಸಲು ಬಿಟ್ಟರೆ, ಅವರಿನ್ನು ಏನು ಮಾಡಿಯಾರು ? ಮೇಯ್ದಿದ್ದೆ, ಮೆಯ್ದಿದ್ದು. ಅಲ್ಲಿ ಇಲ್ಲಿ ಔಷಧ ಅಂಗಡಿಗಳಲ್ಲಿ ಕೆಲಸ ಮಾಡಿ, ಒಂದಿಷ್ಟು ಸರ್ವೀಸ್ ಮಾಡಿಕೊಂಡ ಹುಡುಗರು, ಹೊಸದಾಗಿ ಅಂಗಡಿ ಆರಂಭಿಸುತ್ತಾರೆ.ಪ್ರಪಗಂಡಾ, ಜನರಿಕ್ ಔಷಧಗಳ ಮಾರಾಟ ಮಾಡಿ ಹಣ ಗಳಿಸಬಹುದು ಎನ್ನುವುದು ಅವರ ಹುನ್ನಾರ.ಅವರ ಹುನ್ನಾರವೇ ಈ ಅಧಿಕಾರಿಗಳಿಗೆ ಭಂಡವಾಳ.

ಹಾಗಂತ ಹೊಸದಾಗಿ ಔಷಧ ವ್ಯಾಪಾರಕ್ಕೆ ಮುಂದಾದವರು ಸುಮ್ಮನೆ ಕುಳಿತಿಲ್ಲ. ಹಣ ಕೊಟ್ಟದ್ದನ್ನು ಮತ್ತು ತೆಗೆದುಕೊಂಡದ್ದನ್ನು ತಮ್ಮ ಮೋಬೈಲ್ ಗಳಲ್ಲಿ ರೆಕಾರ್ಡ ಮಾಡಿಕೊಂಡಿದ್ದಾರೆ.ಆದರೆ ಈ ಚಿತ್ರಿಕರಣವನ್ನು ಬಹಿರಂಗ ಗೊಳಿಸುವುದರಿಂದ ತಮಗೆ ಅಧಿಕಾರಿಗಳಿಂದ ತೊಂದರೆಯಾಗಬಹುದೆಂದು ಸುಮ್ಮನಿದ್ದಾರೆ. ಕೂಡಲೇ ಅವರಲ್ಲಿರುವ ಚಿತ್ರಿಕರಣ ಬಿಡುಗಡೆ ಮಾಡಿದರೆ, ಅಧಿಕಾರಿಗಳಿಂದ ತಮ್ಮ ಮುಂದಿನ ವ್ಯವಹಾರಕ್ಕೆ ತೊಂದರೆಯಾಗಬಹುದೆಂದು ಹೊಸ ಔಷಧ ವ್ಯಾಪಾರಿಗಳು ಹೆದರಿದ್ದಾರೆ.ವರ್ಗವಾದ ಮೇಲೆ ಬಿಡುಗಡೆ ಮಾಡಬೇಕೆಂದರೆ 'ವಜಾ' ಆಗಲಿರುವ ಪಟ್ಟಿಯಲ್ಲಿನ ಅಧಿಕಾರಿಗಳು ಈ ಸಾರಿ ವರ್ಗವಾಗಲಿಲ್ಲ.

ಹೇಗೂ ನೌಕರಿಯಿಂದ ವಜಾ ಆಗುತ್ತೇವೆ ಎಂದು ಕೊಂಡಿರುವ ಅಧಿಕಾರಿಗಳು ಅವಸರದಲ್ಲಿ ಅಪಾದನೆ ಹೊತ್ತ ಈ ಅಧಿಕಾರಿಗಳು ಹಣ ಮಾಡಲು ಹೊರಟಿದ್ದಾರೆ.ಈ ಮಹಾನ್ ಕೆಲಸ ಇಂತಹ ಅಧಿಕಾರಿಗಳಿಂದ ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ಅವದಿಯಿಂದಲೂ ನಡೆದಿದೆ. ನೌಕರಿಯಿಂದ ವಜಾ ಆಗುವುದು ಗ್ಯಾರಂಟಿಯಾಗಿದ್ದರೂ ಈ ಅಧಿಕಾರಿಗಳು ವರ್ಷದ ಮಾಮೂಲು ಸಂಗ್ರಹಿಸುವುದನ್ನೂ ಬಿಟ್ಟಿಲ್ಲ.ಇದಕ್ಕಾಗಿ ಅವರು ಔಷಧ ವ್ಯಾಪಾರಿಗಳ ದುಂಬಾಲು ಬಿದ್ದಿದ್ದಾರೆ.ಇದು ಔಷಧ ವ್ಯಾಪಾರಿ ಸಂಘಗಳ ಮುಖ್ಯಸ್ಥರನ್ನು ಪೇಚಿಗೆ ಸಿಕ್ಕಿಸಿದೆ.


ಹಣ ಹೊಂದಿಸಿ ಕೊಡದ ಔಷಧ ವ್ಯಾಪಾರಿ ಮುಖಂಡರ ಮೇಲೆ ಸುಖಾ ಸುಮ್ಮನೆ ಆರೋಪ ಮಾಡಿ,ಔಷಧ ವ್ಯಾಪಾರಿಗಳ ಸಂಘದಲ್ಲಿ ಭಿನ್ನಾಭಿಪ್ರಾಯಗಳನ್ನು ಹುಟ್ಟು ಹಾಕಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿವೆ.ಅಧಿಕಾ-ರಿಗಳ ಚಾಡಿ ಮಾತನ್ನು ಕೂಡಲೇ ನಂಬುವ ಔಷಧ ವ್ಯಾಪಾ-ರಿಗಳು,ತಮ್ಮ ಸಂಘದ ಪದಾಧಿಕಾರಿಗಳ ಮೇಲೆ ಅನುಮಾನ ಪಡುವಂತಾಗಿದೆ.ಬಹುತೇಕ ಜಿಲ್ಲೆಗಳಲ್ಲಿ ಔಷಧ ವ್ಯಾಪಾರಿಗಳ ಸಂಘಗಳನ್ನು ಒಡೆದು ಆಳುವ ನೀತಿಯನ್ನು ಮೈಗೂಡಿಸಿಕೊಂಡಿರುವ ಅಧಿಕಾರಿಗಳು ತಮ್ಮ 'ಕಲೆಕ್ಷನ್' ಕಾರ್ಯವನ್ನು ಸರಳವಾಗಿಸಿ ಕೊಳ್ಳುತ್ತಿದ್ದಾರೆ.

ರಾಜ್ಯ ಮತ್ತು ಜಿಲ್ಲೆಗಳಲ್ಲಿ ಸದೃಢ ಸಂಘಗಳು ಇಲ್ಲದಿರುವುದು,ಅಧಿಕಾರಿಗಳ ಪಾಲಿಗೆ ವರವಾಗಿ ಪರಿಣಮಿಸಿದೆ. ಔಷಧ ವ್ಯಾಪಾರಿಗಳ ಒಗ್ಗಟ್ಟನ್ನು ಒಡೆಯುವಲ್ಲಿ ಅಧಿಕಾರಿಗಳದ್ದೇ ಮೇಲುಗೈ ! ವಿಧಿ ಇಲ್ಲದೇ ಔಷಧ ವ್ಯಾಪಾರಿಗಳು ಅಧಿಕಾರಿಗಳ ಮಾತಿಗೆ, ಬೇಡಿಕೆಗೆ ಸ್ಪಂದಿಸಲೇ ಬೇಕಾದ ಅನಿವಾರ್ಯತೆಗೆ ಒಗ್ಗಿ ಹೋಗಿದ್ದಾರೆ. ಔಷಧ ವ್ಯಾಪಾರಿಗಳಿಗೆ ಸಂಘಗಳ ಸಹವಾಸಕ್ಕಿಂತ, ಅಧಿಕಾರಿಗಳ ಸಖ್ಯವೇ ಉತ್ತಮ ಎನ್ನುವ ವಾತಾವರಣ ನಿರ್ಮಾಣವಾಗಿ ಬಿಟ್ಟಿದೆ.ಅತ್ತ ಅಧಿಕಾರಿಗಳ ಮುಷ್ಟಿ ಬಿಗಿಯಾಗುತ್ತಿದ್ದರೆ,ಇತ್ತ ಔಷಧ ವ್ಯಾಪಾರಿಗಳ ಹಿಡಿತ ಬಿಗಿ ತಪ್ಪುತ್ತಿದೆ.

---

# ಮನುಷ್ಯನ ಅಂಗೈಯಲ್ಲಿ ಮೊಬೈಲ್ ಎಂಬ ಪ್ರಪಂಚ; ಕನ್ನಡದ ಯಾಪ್‌ಗಳು ಜಾಸ್ತಿ ಬರಬೇಕು

ಸಾಕಷ್ಟು ದೊಡ್ಡದಾದ ಪಟ್ಟಿಯೇ ಆಗಬಹುದೇನೋ. ಮುಖ್ಯವಾದ ವಿಷಯವೆಂದರೆ ಸಾಹಿತ್ಯ, ಭಾಷೆ ಹಾಗೂ ಮನರಂಜನೆಯ ಆಧಾರಿತ ಆಪ್ಸ್‌ಗಳು ಆನ್ ಲೈನ್ ಸ್ಟೋರ್ಸ್ ಗಳಲ್ಲಿ ಲಭ್ಯವಿದೆ. ಆದ-'ರೆ ಅದು ಎಷ್ಟು ಜನರನ್ನು ಆಕರ್ಷಿಸುತ್ತವೆ ಎಂದು ನೋಡಬೇಕು. ಜನರಲ್ಲಿ ಕನ್ನಡ ಆಪ್ ಗಳ ಬಗ್ಗೆ ಮೊದಲಿಗಿಂತ ಇಂದು ಆಸಕ್ತಿ ತುಂಬಾ ಹೆಚ್ಚಿದೆ, ಇದು ಡೆವಲಪರ್ಸ್‌ಗೆ ಹಾಗೂ ಕನ್ನಡ ಅಭಿಮಾನಿಗಳಿಗೆ ಸಂತಸದ ವಿಷಯ.




ಇಂದು ಎಷ್ಟೇ ಆಪ್ಸ್ ಇದ್ದರೂ ಕೂಡ, ಕನ್ನಡ ಆಪ್ಸ್ ಗಳ ಕೊರತೆ ಇದೆ. ರೈಲ್ವೆ ರಿಸರ್ವೆಷನ್ ಬಗ್ಗೆ ತಿಳಿದುಕೊಳ್ಳಲು, ಬ್ಯಾಂಕಿಂಗ್ ( ಕೆನರಾ, ಕರ್ನಾಟಕ, ಕಾರ್ಪೊರೇಷನ್, ಸಿಂಡಿಕೇಟ್ ಬ್ಯಾಂಕುಗಳು ಕರ್ನಾಟಕದ್ದೇ ಆದರೂ ಒಂದೂ ಕನ್ನಡ ಆಪ್ಸ್ ಗಳನ್ನು ತಂದಿರುವ ಬಗ್ಗೆ ನನಗೆ ಗೊತ್ತಿಲ್ಲ), ಚಿತ್ರ ಮಂದಿರಗಳ ಆಪ್ಸ್, ಕನ್ನಡ ಸಾಹಿತ್ಯದ ಆಪ್ಸ್ ಹೀಗೆ ಹಲವಾರು ಅವಕಾಶಗಳಿವೆ. ಇನ್ನು ಜನಪ್ರಿಯತೆಯನ್ನು ಗಳಿಸಲು ಹಲವಾರು ಇಂಗ್ಲೀಷ್ ಮಾದರಿಯ ಆಪ್ ಗಳನ್ನೂ ಕನ್ನಡದಲ್ಲಿ ಡೆವಲಪ್ ಮಾಡಬಹುದು. ಆರೋಗ್ಯಕ್ಕೆ ಸಂಬಂಧಪಟ್ಟ ಆಪ್ಸ್ ಗಳನ್ನು ಕನ್ನಡದಲ್ಲಿ ಮಾಡಬಹುದು. ಕನ್ನಡ ಜಾನಪದ ಜಗತ್ತು ಎಷ್ಟು ಶ್ರೀಮಂತವಾಗಿದೆ, ಅದನ್ನೆಲ್ಲ ಸೇರಿಸಿ ಒಂದು ಆಪ್ಸ್ ಡೆವಲಪ್ ಮಾಡಬಹುದು. ಡೆವಲೆಪ್ ಮಾಡುವುದು ಒಂದು ಚಾಲೆಂಜ್ ಆದರೆ ಅದನ್ನು ಉತ್ಕೃಷ್ಟವಾಗಿ, ಆಕರ್ಷಣೀಯವಾಗಿ ಮಾಡುವುದು ಇನ್ನೂ ದೊಡ್ಡ ಚಾಲೆಂಜ್. ಅದಕ್ಕೆ ಬೇಕಾದ ಜನ, ಮನ, ಎಲ್ಲಕ್ಕಿಂತಲೂ ಮುಖ್ಯವಾಗಿ ಹಣದ ಸಂಯೋಜನೆ ಸಂಗ್ರಹಣೆ ಮುಖ್ಯ.

ಕನ್ನಡದ ಆಪ್ಸ್ ಗಳು ಮೊಬೈಲ್ ನಲ್ಲಿ ತುಂಬಬೇಕು. ಜನ ಹೇಗೆ ಭಾಷೆಯನ್ನು ಜನಜೀವನದಲ್ಲಿ ಬಳಸುತ್ತಾರೋ ಹಾಗೆಯೇ ಮೊಬೈಲ್ ನಲ್ಲೂ ಕೂಡ ಬಳಸಬೇಕು. ಶಹರದಿಂದ ಹಳ್ಳಿಯವರೆಗೆ, ಶ್ರೀಮಂತನಿಂದ ಹಿಡಿದು ಬಡವನವರೆಗೆ ಆಪ್ ಗಳು ಸಿಗುವಂತಿರಬೇಕು. ಭಾಷೆಯೂ ತಂತ್ರಜ್ಞಾನವನ್ನು ಬಳಸಿಕೊಂಡು ಆಧುನಿಕವಾಗಬೇಕು. ಭಾಷೆ ಮಿದುಳಿನಂತೆ....ಬಳಸಿದಷ್ಟು ಬೆಳೆಯುವುದು.

# ಗಣಿ ಮಾಫಿಯಾದ ಜೊತೆ ಸೇರಿಕೊಂಡ ಕೊಪ್ಪಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ!!





## ದೂರು ನೀಡಿದ ಪತ್ರಕರ್ತ ಗೋವಿಂದರಾಜ ಬೂದಗುಂಪ ಮೇಲೆ ಹಲ್ಲೇ ಪ್ರಯತ್ನ:

**ಗಣಿ ಮಾಲೀಕರು ನಿಯಮ ಉಲ್ಲಂಘಿಸಿ ಗಣಿ ಮಾಫಿಯ ಮಾಡುತ್ತಿರುವ ಅದರ ವಿರುದ್ಧ ಸಾಕಷ್ಟು ಬಾರಿ ಗೋವಿಂದರಾಜ್ ಬೂದಗುಂಪ ಅನ್ನುವ ಪತ್ರಕರ್ತರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದೂರು ನೀಡಿದ್ದಾರೆ ಇದರ ಬೆನ್ನಲ್ಲೇ ಸ್ಥಳೀಯ-ರಿಂದ ಅವರಿಗೆ ಬೆದರಿಕೆ ಒಡ್ಡಲಾಗುತ್ತಿದೆ, ಜನಸಂದಣಿ ಮತ್ತು ಸಾಕುಪ್ರಾಣಿಗಳು ಓಡಾಡುವ ಪ್ರದೇಶದಲ್ಲಿ ಕಲ್ಲು ಕ್ವಾರಿಗಳಿಗೆ ಕೊಪ್ಪಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಣ್ಣು ಮುಚ್ಚಿ ಪರವಾನಿಗೆ ನೀಡಿದೆ, ಇದರಿಂದ ರೈತಾಪಿ ವರ್ಗದ ಜನರು ಆ ಭಾಗದಲ್ಲಿ ಜೀವವನ್ನು ಕೈಯಲ್ಲಿ ಇಟ್ಟುಕೊಂಡು ತಿರುಗುವಂತಾಗಿದೆ, ಇದರ ಬಗ್ಗೆ ಪ್ರಶ್ನೆ ಮಾಡಿದರೆ ಕೆಲವೊಂದಿಷ್ಟು ಗಣಿ ಮಾಲೀಕರ ಬಾಡಿಗೆ ಗುಂಡಾಗಳು ಪ್ರಶ್ನೆ ಮಾಡಿದವರ ಮೇಲೆ ಹಲ್ಲೇ ಮಾಡುತ್ತಾರೆ, ಈ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತರು ಲೋಕಾಯುಕ್ತಕ್ಕೆ ನೇರವಾಗಿ ದೂರು ಸಲ್ಲಿಸಲು ಮುಂದಾಗಿದ್ದಾರೆ.**

ಕಾನೂನುಗಳನ್ನು ಮೀರಿ ಕಲ್ಲು ಕ್ವಾರಿ ಹಾಗೂ ಕ್ರಷರ್ ಗಳು ಕೆಲಸ ಮಾಡುತ್ತಿದ್ದರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಮಾತ್ರ ಕಚೇ-ರಿಗೆ ಸೀಮಿತವಾಗಿದ್ದಾರೆ. ಪರಿಣಾಮ ಅಮಾಯಕ ಕಾರ್ಮಿಕರು ಪ್ರಾಣ ಕಳೆದುಕೊಳ್ಳುವ ಮುಂದುವ-ರಿದಿದೆ. ಎಷ್ಟೋ ಜನರ ಪ್ರಾಣ ಹೋದರೂ ಕೂಡ ಅವುಗಳು ಹೊರಗಡೆ ಬರದಂತೆ ರಾಜಿ ಮಾಡಿಕೊಳ್ಳುತ್ತಿದ್ದಾರೆ ಕ್ವಾರಿ ಮತ್ತು ಕ್ರಷರ್ ಮಾಲೀಕರು.


ಕೊಪ್ಪಳದ ಆಸುಪಾಸಿನಲ್ಲಿ ಇರುವ ಕಲ್ಲುಕಾ-ರಿಗಳಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿ ಸಾಕಷ್ಟು ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ, ಆದರೂ ಗಣಿ ಸುರಕ್ಷತೆಗೆ ಕಟ್ಟುನಿಟ್ಟಿನ ನಿಯಮಗಳ ಜಾರಿಗೆ ಅಧಿಕಾ-ರಿಗಳು ಮುಂದಾಗಿಲ್ಲದ ಕಾರಣ ವ್ಯಾಪಕ ಭ್ರಷ್ಟಾಚಾರಕ್ಕೆ ಕಾರಣವಾಗಿದೆ ಗಣಿ ಇಲಾಖೆಯ ಅಧಿಕಾರಿಗಳ ಮೌನದಿಂದ, ಪರವಾನಿಗೆ ನವೀಕರಣ ಸಂದರ್ಭದಲ್ಲಿ ಚುರುಕಿನಿಂದ ಕೆಲಸ ಮಾಡುವ ಇಲಾಖೆ ಸಿಬ್ಬಂದಿಗಳು ನಂತರದಲ್ಲಿ ಕಚೇರಿಗಳಿಗೆ ಸೀಮಿತರಾಗುತ್ತಿದ್ದಾರೆ, ಸಾರ್ವಜನಿಕ-ರಿಂದ ದೂರುಗಳು ಬಂದರೂ ಕಾಟಾಚಾರಕ್ಕೆ ಸ್ಥಳ ಪರಿಶೀಲಿಸಿ ಸುಮ್ಮನಾಗುತ್ತಿದ್ದಾರೆ ಮತ್ತು ಕ್ವಾರಿ ಮತ್ತು ಕ್ರಷರ್ ಮಾಲೀಕರೊಂದಿಗೆ ಶಾಮೀಲಾಗಿ ಈ ರೀತಿ ಮಾಡಿ ಈ ದೂರು ಸರಿ ಹೋಗುತ್ತದೆ ಎಂದು ಸ್ವತಃ ಅಧಿಕಾರಿಗಳೇ ಹೇಳಿ ಕೊಡುತ್ತಿದ್ದಾರೆ, ಅಧಿಕಾರಿಗಳು ಹೇಳಿದಂತೆ ಕ್ರಷರ್ ಮತ್ತು ಕ್ವಾರಿ ಮಾಲೀಕರು ಹಳ್ಳಿ ಯವರನ್ನು ಉಪಯೋಗ ಮಾಡಿಕೊಂಡು ದೂರು ಕೊಟ್ಟವರ ಮೇಲೆ ಪ್ರಹಾರ ಮಾಡುವಂತೆ ಮಾಡುತ್ತಿದ್ದಾರೆ,

**ಮುಲಾಜಿಗೆ ಮನ್ನಣೆ:** ನಿಯಮಿತವಾಗಿ ಕ್ವಾರಿಕ್ರಶರ್ ಗಳಿಗೆ ಭೇಟಿ ನೀಡಿ ನಿಯಮ ಪಾಲನೆಗಳ ಬಗ್ಗೆ ಅಧಿಕಾರಿಗಳು ಕಾತ-ರಿಪಡಿಸಿಕೊಳ್ಳಬೇಕು,

ಉಲ್ಲಂಘನೆ ಪ್ರಕರಣಗಳಲ್ಲಿ ನೋಟಿಸ್ ಜಾರಿಗೂ ಅಧಿಕಾರವಿದೆ ಆದರೂ ಕಲ್ಲುಕ್ವಾರಿ ಕ್ರಶರ್ ಮಾಲೀಕರ ಒತ್ತಡ ಹಾಗೂ ಮರ್ಜಿಗೆ ಒಳಗಾಗಿ ದೂರುಗಳು ಬಂದರು ಗಂಭೀರವಾಗಿ ಪರಿಗಣಿಸುತ್ತಿಲ್ಲ ಗಣಿ ಮತ್ತು ಭೂ ವಿಜ್ಞಾನ ಇಲಾಖೆ.

**ನಿಯಮ ಮೀರಿ ಜಿಲೇಟಿನ್ ಬಳಕೆ:** ಕ್ವಾರಿ ಗಳಲ್ಲಿ ದೊಡ್ಡ ಬಂಡೆಗಳನ್ನು ಒಡೆಯಲು ಜಿಲೆಟಿನ್ ಬಳಸಲು ಅವಕಾಶವಿದೆ, ಆದರೆ ಸ್ಫೋಟಕಗಳನ್ನು ಬಳಸಲು ಕೇಂದ್ರ ಗಣಿ ಸುರಕ್ಷತೆಯ ಪ್ರಧಾನ ನಿರ್ದರ್ಶಕರಿಂದ ಅನುಮತಿ ಪಡೆಯಬೇಕು ಸ್ಫೋಟಕದ ಲೈಸೆನ್ಸ್ ಹೊಂದಿರುವ ವ್ಯಕ್ತಿಯ ಮಾರ್ಗದರ್ಶನದಲ್ಲಿ ಸ್ಫೋಟಿಸುವದು ಕಡ್ಡಾಯವಾಗಿದೆ, ಆದರೆ ಬಹುತೇಕ ಕ್ವಾರಿಗಳಲ್ಲಿ ಉತ್ತರ ಭಾರತದ ಕಾರ್ಮಿಕರೇ ಜಿಲೆಟಿನ್ ಗಳನ್ನು ಅಳವಡಿಕೆ ಮಾಡಿ ಸ್ಫೋಟಿಸುತ್ತಿದ್ದಾರೆ, ಹೆಚ್ಚಿನ ಬಂಡೆಗಳನ್ನು ಹೊಡೆಯಬೇಕೆಂಬ ದುರಾಸೆಯಿಂದ ನಿಯಮ ಮೀರಿದ ಕೆಲಸ ಮಾಡಲಾಗುತ್ತಿದೆ ಇದು ಕಾರ್ಮಿಕರ ಜೀವಕ್ಕೆ ಆಪತ್ತು ತರುತ್ತಿದೆ. ಕೊಪ್ಪಳ ತಾಲೂಕಿನ ಸುಲ್ತಾನಪುರ ವ್ಯಾಪ್ತಿಯಲ್ಲಿ ಬರುವ ಕಲ್ಲು ಕ್ರಶರ್ ಕ್ವಾ-ರಿಗಳಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿವೆ, ಆದರೆ ಅವು ಹೊರಗಡೆ ಬರುವುದಿಲ್ಲ ಮಾಲೀಕರ ಮರ್ಜಿಗೆ ಒಳಗಾಗಿ ಸ್ಥಳೀಯರಿಂದಲೇ ರಾಜಿ ಮಾಡಲ್ಪಡುತ್ತಿವೆ ಇಂತಹ ಪ್ರಕರಣಗಳು,

**ಕಲ್ಲು ಕ್ರಷರ್ ಕ್ವಾವಾರಿಗಳಲ್ಲಿ ನಡೆಯುವ ಸಾವುನೋವಿನ ಪ್ರಕರಣಗಳು ಬಯಲಿಗೆ ಬರುವುದಿಲ್ಲ:** ಸಾಕಷ್ಟು ಸಾವು ನೋವಿನ ಪ್ರಕರಣಗಳು ನಡೆದರೂ ಕೂಡ ದಾಖಲಾಗುವುದೇ ಇಲ್ಲ, ಇದಕ್ಕೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಕ್ರಷರ್ ಮಾಲೀಕರ ಪ್ರಭಾವ ಕಾರಣ ಅನ್ನಬಹುದು, ಸ್ಥಳೀಯ ಒಂದಿಷ್ಟು ಮುಖಂಡರನ್ನು ಕರೆಸಿ ಅನ್ಯಾಯದ ರಾಜಿ ಮಾಡಿಸಿ ಪ್ರಕರಣಗಳನ್ನು ಮುಚ್ಚಿ ಹಾಕುವಲ್ಲಿ ಕ್ರಷರ್ ಮತ್ತು ಕ್ವಾರಿ ಮಾಲೀಕರು ಯಶಸ್ವಿಯಾಗುತ್ತಿದ್ದಾರೆ, ಆದರೆ ಪೋಲಿಸ್ ಇಲಾಖೆಯಲ್ಲಿ ಪ್ರಕರಣಗಳು ದಾಖಲಾಗದೆ ಸಾವು ನೋವಿನ ಅಂಕಿ ಅಂಶಗಳು ತಿಳಿಯುತ್ತಿಲ್ಲ ಇದು ಒಂದು ರೀತಿಯ ಗಣಿ ಮಾಫಿಯಾ ಅಂತಲೇ ಹೇಳಬಹುದು.



# ಈ ಕಳಪೆ ಮತ್ತು ಮಾನಸಿಕವಾಗಿ ಕಾಣುವ ವ್ಯಕ್ತಿ ಯಾರು?

## ಮಹಾನ್ ಡಾ.ಆಲ್ಬರ್ಟ್ ಐನ್‌ಸ್ಟೈನ್ ಅವರ ಪಕ್ಕದಲ್ಲಿ ಅವರ ಚಿತ್ರ ಏಕೆ?

ಈ ಕೊಳಕು ವ್ಯಕ್ತಿ ಮಹಾನ್ ಗಣಿತಜ್ಞ, ಡಾ.ವಶಿಷ್ಠ ನಾರಾಯಣ ಸಿಂಗ್. ಅವರ ಕ್ಷೇತ್ರದಲ್ಲಿನ ಇತರ ಸಾಧನೆಗಳ ನಡುವೆ, ಅವರು ಡಾ. ಆಲ್ಬರ್ಟ್ ಐನ್ಸ್ಟೈನ್ ಅವರ ಸಾಪೇಕ್ಷತಾ ಸಿದ್ಧಾಂತವನ್ನು ಸವಾಲು ಮಾಡಿದರು. ಮತ್ತು ಈ ಅದ್ಭುತ ಸಹೋದ್ಯೋಗಿ ತನ್ನ ಕೊನೆಯ/ದಿನದ ದಿನಗಳಲ್ಲಿ ಹೀಗೆಯೇ ಇದ್ದನು. ಅನಾರೋಗ್ಯ, ಕಳಪೆ, ನಿರಾಶ್ರಿತ, ಕಳೆದುಹೋದ ಮನಸ್ಸು, ಸಂಪೂರ್ಣ ಅನಾಮಧೇಯತೆಯಲ್ಲಿ.

ಅವರು 1942 ರಲ್ಲಿ ಭಾರತದ ಬಿಹಾರ, ಪಾಟ್ನಾದಲ್ಲಿ ಜನಿಸಿದರು. 1961 ರಲ್ಲಿ ಅವರನ್ನು ಪಾಟ್ನಾದ ಪ್ರತಿಷ್ಠಿತ ವಿಜ್ಞಾನ ಕಾಲೇಜಿಗೆ ಸೇರಿಸಲಾಯಿತು. ಅದರ ನಂತರ, ಅವರು ಗಣಿತಶಾಸ್ತ್ರವನ್ನು ಅಧ್ಯಯನ ಮಾಡಲು ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ಹೋದರು ಮತ್ತು ಅಲ್ಲಿ ತಮ್ಮ ಪಿಎಚ್‌ಡಿ ಫಾರ್ಮ್ ಅನ್ನು ಪಡೆದರು. 1969 ರಲ್ಲಿ ಅವರು ಅಮೇರಿಕಾದ ವಾಷಿಂಗ್ಟನ್ ಆಅ ಯಲ್ಲಿ ಸಹಾಯಕ ವಿಜ್ಞಾನಿ ಪ್ರೊಫೆಸರ್ ಆಗಿ NASA ಗೆ ಸೇರಿದರು. 1972 ರಲ್ಲಿ ಅವರು ಭಾರತಕ್ಕೆ ಹಿಂದಿರುಗಿದರು ಮತ್ತು ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ನಲ್ಲಿ ಉಪನ್ಯಾಸಕರಾಗಿ ಸೇರಿದರು.

ವಶಿಷ್ಠ ನಾರಾಯಣ ಸಿಂಗ್ ಅವರು ಐನ್‌ಸ್ಟೈನ್‌ನ ಸಾಪೇಕ್ಷತಾ ಸಿದ್ಧಾಂತವಾದ 'ಇ=ಎಂಸಿ2'ಗೆ ಸವಾಲು ಹಾಕಿದ್ದರು. ಅವರು ಮಠದಲ್ಲಿ ಗೌಸ್ ಅವರ ಪ್ರಮೇಯವನ್ನು ಪ್ರಶ್ನಿಸಿದರು. ಅವರು ನಾಸಾದಲ್ಲಿ ಕೆಲಸ ಮಾಡುತ್ತಿದ್ದಾಗ, ಅಪೊಲೊ (ಬಾಹ್ಯಾಕಾಶ ನೌಕೆ) ಉಡಾವಣೆ ಮಾಡುವ ಮೊದಲು 31 ಕಂಪ್ಯೂಟರ್‌ಗಳನ್ನು ಸಂಕ್ಷಿಪ್ತವಾಗಿ ಸ್ಥಗಿತಗೊಳಿಸಲಾಯಿತು. ಈ ಸಮಯದಲ್ಲಿ, ಅವರು ಪೆನ್ನು ಮತ್ತು ಪೆನ್ಸಿಲ್ನಿಂದ ಲೆಕ್ಕ ಹಾಕಲು ಪ್ರಾರಂಭಿಸಿದರು. ಕಂಪ್ಯೂಟರ್‌ಗಳನ್ನು ಸರಿಪಡಿಸಿದಾಗ, ಅವನ ಮತ್ತು ಕಂಪ್ಯೂಟರ್‌ನ ಲೆಕ್ಕಾಚಾರಗಳು ಒಂದೇ ಆಗಿದ್ದವು ಮತ್ತು ಒಂದೇ ಆಗಿದ್ದವು. ಮೆದುಳು ಕಂಪ್ಯೂಟರ್‌ಗಿಂತ ವೇಗವಾಗಿ ಕೆಲಸ ಮಾಡುವ ವ್ಯಕ್ತಿ ಎಂದು ಅವರನ್ನು ಕರೆಯಲಾಯಿತು.

ಸಾವಿಗೆ ಮುಂಚಿನ ಕೊನೆಯ ದಿನಗಳಲ್ಲಿಯೂ, ಬರವಣಿಗೆಯ ಪ್ರತಿ, ಪುಸ್ತಕಗಳು, ಪೆನ್ ಮತ್ತು ಪೆನ್ಸಿಲ್ ಅವರ ಆತ್ಮೀಯ ಸ್ನೇಹಿತರಾಗಿದ್ದರು. ನಾಲ್ಕನೇ ದಿನಕ್ಕೆ ಒಂದು ಹೊಸ ಪ್ರತಿ ಮತ್ತು ಪೆನ್ಸಿಲ್ ಅನ್ನು ಅವನಿಗೆ ಖರೀದಿಸಲಾಯಿತು. ಅಮೆರಿಕದಿಂದ ಬರುವಾಗ 10 ಬಾಕ್ಸ್ ತುಂಬ ಪುಸ್ತಕಗಳನ್ನು ತಂದಿದ್ದರು.

ಡಾ. ವಶಿಷ್ಠ ನಾರಾಯಣ ಸಿಂಗ್ ಅವರು ಮೂರು ದಶಕಗಳಿಂದ ಸ್ಕಿಜೋಫ್ರೇನಿಯಾ (ಮಾನಸಿಕ ಕಾಯಿಲೆ) ಯೊಂದಿಗೆ ಹೋರಾಡಿದರು. ಅವನನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲ, ಅವನು ಒಬ್ಬಂಟಿಯಾಗಿ ಬಳಲುತ್ತಿದ್ದನು. ಅವರ ಅನಾರೋಗ್ಯ ಮತ್ತು ಅಸಹಜ ನಡವಳಿಕೆಯಿಂದಾಗಿ ಅವರ ಪತ್ನಿ ವಿಚ್ಛೇದನ ನೀಡಿದ್ದರು. ಅವರು ಅನಾಮಧೇಯವಾಗಿ ನಿಧನರಾದರು, ಅವರು 2019 ರಲ್ಲಿ ಸಾಮಾನ್ಯ ಆತ್ಮದಂತೆ ನಿಧನರಾದರು.


ಅವರು ಬಯಸಿದ್ದರೆ, ಅವರು ಅಮೇರಿಕಾದಲ್ಲಿ ಉಳಿಯಬಹುದಿತ್ತು ಮತ್ತು ಶ್ರೀಮಂತ, ಹೆಸರಾಂತ ವ್ಯಕ್ತಿಯಾಗುತ್ತಿದ್ದರು. ಆದರೆ, ಬದಲಿಗೆ ಅವರು ಭಾರತಕ್ಕೆ ಮರಳಲು ಮತ್ತು ಗಣಿತ ಕ್ಷೇತ್ರದಲ್ಲಿ ಉದಯೋನ್ಮುಖ, ಯುವ ವಿದ್ಯಾರ್ಥಿಗಳಿಗೆ ಕಲಿಸಲು ಆಯ್ಕೆ ಮಾಡಿದರು.

ಭಾರತವು ನಿಜವಾದ ಮೇಧಾವಿಗಳು ಮತ್ತು ಪ್ರತಿಭೆಗಳನ್ನು ಗೌರವಿಸಲು ವಿಫಲವಾಗಿದೆ. ಇದು ದುಃಖ ಆದರೆ ಸತ್ಯ! . ಪ್ರತಿಭಾವಂತರು ಭಾರತದಲ್ಲಿ ರಹಸ್ಯ ಜೀವನವನ್ನು ನಡೆಸುತ್ತಾರೆ ಮತ್ತು ಸರ್ಕಾರ ಮತ್ತು ಮಾಧ್ಯಮಗಳಿಂದ ನಿರ್ಲಕ್ಷಿಸಲ್ಪಡುತ್ತಾರೆ. ಭಾರತದಲ್ಲಿನ ಅಸಾಮಾನ್ಯರಿಗೆ ಸಿಗಬೇಕಾದ ಮನ್ನಣೆ ಮತ್ತು ಗೌರವ ಸಿಗುವುದಿಲ್ಲ. ಅವರನ್ನು ನೋಡಿಕೊಳ್ಳುವುದೂ ಇಲ್ಲ, ಕಾಳಜಿ ವಹಿಸುವುದೂ ಇಲ್ಲ. ಭಾರತದಲ್ಲಿನ ಪ್ರತಿಭಾವಂತರು ವಿಸ್ಮೃತಿಯಲ್ಲಿ ತೀರುತ್ತಾರೆ.

ನಟರು ಮತ್ತು ಕ್ರಿಕೆಟಿಗರು ಭಾರತದಲ್ಲಿ ದೇವರೆಂದು ವೇದಿಕೆಗೆ ಏರಿದ್ದಾರೆ. ಆದರೆ, ಡಾ.ವಶಿಷ್ಠರಂತಹ ತೇಜಸ್ವಿ ಮನಸ್ಸುಗಳ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಭಾರತವು ತನ್ನ ಪ್ರತಿಭೆಗಳ ಸಮೂಹವನ್ನು ಪ್ರೋತ್ಸಾಹಿಸುವಲ್ಲಿ ವಿಫಲವಾಗಿದೆ, ಅವರನ್ನು ಬೆಳೆಸುವಲ್ಲಿ ವಿಫಲವಾಗಿದೆ ಮತ್ತು ಅವುಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುತ್ತದೆ.







# ಕಳ್ಳ ಪತ್ರಕರ್ತರು ಮತ್ತು ಸಂಘಟಕರನ್ನು ಪತ್ತೆಹಚ್ಚಿ ಕ್ರಮ ತೆಗೆದುಕೊಳ್ಳಿ





ಇತ್ತೀಚೆಗೆ ಕೊಪ್ಪಳ ಜಿಲ್ಲೆಯಲ್ಲಿ ಕನ್ನಡಪರ ಸಂಘಟನೆಗಳು ಮತ್ತು ಪತ್ರಕರ್ತರು ಅಂತ ಹೇಳಿಕೊಂಡು ಕೆಲವು ಜನ ವಸೂಲಿಗೆ ಇಳಿದಿರುವುದು ದುರದೃಷ್ಟಕರ ಸಂಗತಿ ಮತ್ತು ಸಮಾಜಕ್ಕೆ ಮಾರಕವಾದ ಅಂಶವಾಗಿದೆ. ಇಂಥವರಿಂದ ನಿಜವಾದ ಪ್ರಾಮಾಣಿಕವಾದ ಕನ್ನಡಪರ ಮತ್ತು ಸಾಮಾಜಿಕ ಪರ ಹೋರಾಟಗಾರರಿಗೂ ಮತ್ತು ಪ್ರಾಮಾಣಿಕ ಪತ್ರಕರ್ತರಿಗೂ ಮಸಿಬಳಿದಂತಾಗುತ್ತಿದೆ ಮತ್ತು ಇಂತಹ ಕಾರ್ಯಚಟುವಟಿಕೆಯಿಂದ ಪತ್ರಿಕೋದ್ಯಮ ಮತ್ತು ಸಂಘಟನೆಗಳಿಗೆ ಬೆಲೆ ಇಲ್ಲದಂತಾಗುತ್ತಿದೆ. ಸಮಾಜದಲ್ಲಿರುವ ಹುಳುಕುಗಳನ್ನು ಮತ್ತು ಅದರ ವಿರುದ್ಧ ಹೋರಾಟ ಮಾಡಬೇಕಾದ ಸಂಘಟನೆಗಳು ಮತ್ತು ಪತ್ರಕರ್ತರು ಕೆಲವು ಜನ ಮಾತ್ರ ಇಂಥ ಹೇಯ ಕೃತ್ಯಕ್ಕೆ ಇಳಿದು ಹೇಸಿಗೆ ತಿನ್ನುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ರೀತಿಯ ಒಳ್ಳೆಯ ಸೈದ್ಧಾಂತಿಕ ಹಿನ್ನೆಲೆಯನ್ನು ಇಟ್ಟುಕೊಳ್ಳದೆ ನಾವು ಪತ್ರಕರ್ತರು ನಾವು ಹೋರಾಟಗಾರರು ನಮಗೆ ತಿಂಗಳಿಗೆ ಇಷ್ಟು ಮುಟ್ಟಿಸಬೇಕು ಇಲ್ಲದಿದ್ದರೆ ನಿಮ್ಮ ಮೇಲೆ ಕೇಸ್ ಮಾಡಲಾಗುತ್ತದೆ ಪೋಲಿಸರಿಗೆ ಫೋನ್ ಹಚ್ಚಿ ಕರೆಸಬೇಕಾಗುತ್ತದೆ ಎಂದು ಧಮ್ಕಿ ಹಾಕುತ್ತಿರುವುದು ಬೆಳಕಿಗೆ ಬಂದಿವೆ. ಆದರೆ ಇದುವರೆಗೂ ಕೂಡ ಅವು ಪೊಲೀಸ್ ಮೆಟ್ಟಿಲು ಹತ್ತದೆ ಇರುವುದು ದುರಾದೃಷ್ಟಕರ, ಜನಸಾಮಾನ್ಯರ ಮೇಲೆ ನಿರಂತರ ದಬ್ಬಾಳಿಕೆ ಮಾಡುವುದು ಇಂತಹ ವ್ಯಕ್ತಿಗಳ ಕೆಲಸವಾಗಿದೆ ಇದರಿಂದ ಪ್ರಾಮಾಣಿಕ ಸಂಘಟಕರು ಮತ್ತು ಪತ್ರಕರ್ತರಿಗೆ ಮಸಿ ಬಳಿಯುತ್ತಾ ತಿರುಗುತ್ತಿರುವ ಇಂಥಾ ಅವಿವೇಕಿಗಳನ್ನು ಸ್ವತಃ ಪ್ರಾಮಾಣಿಕ ಪತ್ರಕರ್ತರು ಮತ್ತು ಸಂಘಟನೆಗಳೇ ಮಟ್ಟ ಹಾಕಬೇಕಾದ ಪರಿಸ್ಥಿತಿ ಉಂಟಾಗಿದೆ. ಇಂಥವರು ರೋಡ್ ರೋಡ್ ಗಳಲ್ಲಿ ಸರ್ಕಲ್ ಗಳಲ್ಲಿ ಕಲ್ಲು ಕ್ವಾರಿಗಳಲ್ಲಿ ಕೋಳಿ ಫಾರಂಗಳಲ್ಲಿ ಬ್ರಾಂಡಿ ಶಾಪ್ ಗಳಲ್ಲಿ ಪ್ರತಿನಿತ್ಯ ದೌರ್ಜನ್ಯ ಮಾಡುತ್ತಿರುವುದು ಕಂಡುಬರುತ್ತಿದೆ.

ಇವರಿಗೆ ಯಾವುದೇ ರೀತಿಯ ಉದ್ಯೋಗಗಳು ಕೂಡ ಇಲ್ಲ ಇದನ್ನೇ ತಮ್ಮ ಉದ್ಯೋಗ ಮಾಡಿಕೊಂಡಿದ್ದಾರೆ ಸಂಘಟನೆ ಮತ್ತು ಪತ್ರಕರ್ತ ಅನ್ನುವ ಹೆಸರುಗಳನ್ನೇ ಬಂಡವಾಳ ಮಾಡಿಕೊಂಡು ಎತ್ತುವಳಿ ಮಾಡುತ್ತಾ ತಿರುಗುತ್ತಿದ್ದಾರೆ ಇಂಥವರಿಂದ ಸಮಾಜಕ್ಕೆ ತುಂಬ ಮಾರಕವಾಗಿದೆ. ಕಾರಣ ಕೂಡಲೇ ಇಂಥವರನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಕೈಗೆಣಟಿಜಜಜಿಟಿಜಜಳ್ಳಬೇಕು. ಇನ್ನೂ ಮುಂದುವರೆದು ಇವರು ಅಧಿಕಾರಿಗಳಂತೆ ವರ್ತನೆ ಮಾಡುತ್ತಿರುವುದು ಕೂಡ ಕಂಡುಬರುತ್ತಿದೆ ಅಧಿಕಾರಿಗಳು ಮಾಡಬೇಕಾದಂಥ ಕೆಲಸವನ್ನು ಇವರು ಮಾಡುತ್ತಿರುವುದು ಯಾವ ಕಡೆಯಿಂದ ಇವರಿಗೆ ಇಂತಹ ಅಧಿಕಾರ ಸಿಕ್ಕಿತು ಅನ್ನುವ ಅನುಮಾನ ಹುಟ್ಟು ಹಾಕುತ್ತಿದೆ, ಇವರು ಯಾವ ರೀತಿ ಕಾರ್ಯಾಚರಣೆಗೆ ಇಳಿಯುತ್ತಾರೆ ಅಂದರೆ ಯಾವುದೇ ಟ್ರಕ್ ಗಳಲ್ಲಿ ಲೋಡ್ ಬಂದರೆ ಅದು ಯಾವುದೇ ಇರಲಿ ಅದರ ಪರ್ಮಿಟ್ ಗಳನ್ನು ಚೆಕ್ ಮಾಡುತ್ತಾರೆ ಮತ್ತು ಡ್ರೈವರ್ ಗಳಿಗೆ ಬೆದರಿಕೆ ಹಾಕುತ್ತಾರೆ. ಸಂಬಂಧಿಸಿದ ಮಾಲೀಕರಿಗೆ ಫೋನ್ ಮಾಡಿ ನೀವು ಇಷ್ಟು ದುಡ್ಡು ಕೊಡದಿದ್ದರೆ ಪೊಲೀಸರಿಗೆ ದೂರುಕೊಡಬೇಕಾಗುತ್ತದೆ ಎಂದು ಬೆದರಿಕೆ ಹಾಕುತ್ತಾರೆ ಆದರೆ ಇಂತಹ ಯಾವುದೇ ಜ್ಞಾನ ಇಲ್ಲದ ಲಾರಿ ಮಾಲೀಕರು ಇವರಿಗೆ ಹೆದರಿ ದುಡ್ಡು ಕೊಡುವಂತಹ ಪರಿಸ್ಥಿತಿಗೆ ಬಂದು ಬಿಡುತ್ತಾರೆ.

ಇದೇ ರೀತಿ ಗಂಗಾವತಿಯಲ್ಲಿ ಮೊನ್ನೆ ತಾನೇ 1ಪ್ರಕರಣ ಕೂಡ ನಡೆದಿದೆ ಆ ರೀತಿ ಮಾಡುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿ ಪ್ರಕರಣ ಕೂಡ ದಾಖಲಿಸಿದ್ದಾರೆ ಇಂತಹ ವ್ಯಕ್ತಿಗಳು ಕೊಪ್ಪಳದಲ್ಲೂ ಕೂಡ ಇದ್ದಾರೆ ಮತ್ತು ಕೊಪ್ಪಳ ಜಿಲ್ಲೆಯಲ್ಲೂ ಕೂಡ ಇದ್ದಾರೆ ಕೂಡಲೇ ಇಂಥ'ವರನ್ನು ಗುರುತಿಸಿ ಇವರ ಮೇಲೆ ಶಿಸ್ತು ಕ್ರಮವನ್ನು ಪೆಣಟಿಜಜಜಿಟಿಜಜಲೀಸ್ ಇಲಾಖೆ ತೆಗೆದುಕೆಣಟಿಜಜಜಿಟಿಜಜಳ್ಳಬೇಕಾಗಿದೆ. ಇಲ್ಲದಿದ್ದರೆ ಸಮಾಜಮುಖಿಯಾದ ಪತ್ರಕರ್ತರು ಮತ್ತು ಸಂಘಟನೆಗಳಿಗೆ ಇವರು ಮಸಿ ಬಳಿಯುವ ಕೆಲಸ ಮಾಡುತ್ತಾರೆ ಇವರಿಂದ ಸಂಘಟನೆಗಳು ಪತ್ರಕರ್ತರು ಅವಮಾನ ಅನುಭವಿಸಬೇಕಾದಂತ ಪರಿಸ್ಥಿತಿ ಎದುರಾಗಿದೆ. ಮುಂದೆ ಇವರು ಸಮಾಜಕ್ಕೆ ಮಾರಕವಾಗಿ ಬೆಳೆಯುತ್ತಾರೆ ಮತ್ತು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುತ್ತಾರೆ ಕಾನೂನುಬಾಹಿರ ಚಟುವಟಿಕೆಗಳನ್ನು ಮಾಡುತ್ತಾ ನಿತ್ಯ ನಿರಂತರ ದೌರ್ಜನ್ಯಗಳನ್ನ ಮಾಡುತ್ತಾ ಸಮಯ ಕಳೆಯುತ್ತಿರುವ ಇಂತಹ ವ್ಯಕ್ತಿಗಳಿಗೆ ಜೈಲೂಟ ಮಾಡಿಸಿದರೆ ಮಾತ್ರ ಇವರು ಸರಿದಾರಿಗೆ ಬರಬಹುದು.

# ಮೊಬೈಲ್ ಎಂಬ ಮಾಯಾಲೋಕದಲ್ಲಿ ಸಂಬಂಧಗಳ ಕೊಂಡಿ ಕಳಚಿದೆ



ಯಾರಾದರೂ ಒಬ್ಬರು ಮೊಬೈಲ್ ನಿಂದ ನನ್ನ ಸಂಸಾರ ಚೆನ್ನಾಗಿದೆ, ನನ್ನ ವೃತ್ತಿಯಲ್ಲಿ ಬೆಳವಣಿಗೆ ಕಂಡಿದ್ದೇನೆ, ನನಗೆ ನೆಮ್ಮದಿ ಸಿಕ್ಕಿದೆ, ಮೊಬೈಲ್ ನಿಂದಲೇ ನಾನು ಅತೀ ಸಂತೋಷವಾಗಿದ್ದೇನೆ ಎಂದು ಹೇಳಲಿ ನೊಡೋಣ. ಹಾಸ್ಯಾಸ್ಪದ ಸಂಗತಿ ಏನೆಂದರೆ ನಾವು ನಮ್ಮ ಆಯುಷ್ಯವಿಡೀ ಸಂಬಂಧಿಗಳನ್ನು, ಗೆಳೆಯರನ್ನು, ಮನೆಯವರನ್ನು, ಸಂಗಾತಿಯನ್ನೂ ದೂರ ಮಾಡಿಕೊಳ್ಳುವಷ್ಟು ಮೊಬೈಲ್ ಹಿಂದೆ ಬಿದ್ದು ಆಟದಲ್ಲಿ ನಮ್ಮ ಸಂತೋಷ , ನೆಮ್ಮದಿ ಹುಡುಕುತ್ತಿರುತ್ತೇವೆ. ಆದರೆ ಕೊನೆಗೆ ನಮ್ಮ ಉಸಿರು ನಿಂತರೂ ಅದರಲ್ಲಿ ನಮ್ಮ ಆ ಹುಡುಕಾಟ ನಿಲ್ಲುವುದಿಲ್ಲ.

ಮೊಬೈಲ್... ಇದು ಯಾರಿಗೆ ತಾನೆ ಗೊತ್ತಿಲ್ಲ ಹೇಳಿ. ಆಗ ತಾನೆ ಅಮ್ಮ ಎಂದು ಹೇಳಲು ಕಲಿತ ಮಗುವಿನಿಂದ ಹಿಡಿದು ಬಿಳಿ ಗಡ್ಡ ಬೆಳೆದ ಹಿರಿ ಜೀವದವರೆಗೂ ಎಲ್ಲರಿಗೂ ಬೇಕಾದ, ಅವಶ್ಯಕ ವಸ್ತು, ಇದೆಲ್ಲದಕ್ಕಿಂತ ಹೆಚ್ಚಾಗಿ ಅವರ ಜೀವ, ಜೀವನದ ಪ್ರಮುಖ ಭಾಗವಾಗಿಯೇ ಬೆಸೆದುಕೊಂಡಿರುವ ಜಂಗಮ ಯಂತ್ರ ಮನುಷ್ಯನ ಎಲ್ಲ ಸಂಬಂಧಿಗಳಿಗಿಂತಲೂ ಶ್ರೇಷ್ಟ. ಆದರೂ ಮೊಬೈಲ್ ನ್ನು ನಮ್ಮ ಸುಖ, ದುಃಖಗಳಲ್ಲಿ ಭಾಗಿಯಾಗುವ ಉತ್ತಮ ಸಂಗಾತಿ, ನಂಬಿಕೆಯ ಗೆಳೆಯ, ಬೇಕಾದಾಗ ಸಲಹೆ ನೀಡುವ ಪಾಲಕನೆಂದೇ ಅಂದುಕೊಂಡಿರುವ ನಾವು ಅದೆಷ್ಟು ಮೂರ್ಖರಲ್ವಾ?

ಮೊಬೈಲ್ ಈ ಪ್ರಪಂಚಕ್ಕೆ ಬಂದ ಮೊದ ಮೊದಲು ನಾವೆಲ್ಲರೂ ಹೆಮ್ಮೆಯಿಂದ ಬೀಗಿದೆವು ಇನ್ನು ಮುಂದೆ ಇಡೀ ಪ್ರಪಂಚ ನಮ್ಮ ಅಂಗೈಯಲ್ಲಿ ಇರುತ್ತೆ ಅಂತ. ಆದರೆ ಇಂದು ಆ ಮೊಬೈಲ್ ಅಂಗೈಯಲ್ಲಿ ನಾವೆಲ್ಲರೂ ಇರುವಂತಾಗಿದೆ. ಇದಕ್ಕೆಲ್ಲಾ ಮೊಬೈಲ್ ಅನ್ನೋ 'ಮಾಯಾವಿ'ಯನ್ನು ನಾವು ನಮ್ಮ ಬದುಕಿನೊಳಗೆ ಅತಿಯಾಗಿ ಬಿಟ್ಟುಕೊಂಡಿದ್ದೇ ಕಾರಣ. ಜಂಗಮವಾಣಿ ಇಂದು ಕೇವಲ ಫೋನ್ ಮಾಡಲು ಮತ್ತು ಮೆಸೆಜ್ ಮಾಡಲಷ್ಟೇ ಉಳಿದಿದ್ದರೆ ಬಹುಷಃ ಮೊಬೈಲ್ ಇಷ್ಟೊಂದು ನಶೆ ಆಗುತ್ತಿರಲಿಲ್ಲ. ಇದು ಮೊಬೈಲ್ ಮಾಡಬೇಕಾದ ಕೆಲಸವನ್ನಷ್ಟೇ ಮಾಡದೆ ಟಿವಿ, ರೇಡಿಯೋ, ಪುಸ್ತಕ, ಸುದ್ದಿ ಪತ್ರಿಕೆ ಹೀಗೆ ಅನೇಕ ವಸ್ತುವಿನ ಕೆಲಸವನ್ನು ಕಸಿದುಕೊಂಡು ಅವರ ಕೆಲಸವನ್ನೂ 'ಪಾರ್ಟ್ ಟೈಮ್ ' ಲೆಕ್ಕದಲ್ಲಿ ಮಾಡುತ್ತಿದೆ. ಇದು ಒಂದು ರೀತಿ ಒಳ್ಳೆಯದೇ.

ಯಾಕೆಂದರೆ ಇಂದಿನ ಆಧುನಿಕ ಹಾಗೂ ಸ್ಪರ್ಧಾತ್ಮಕ ಯುಗದಲ್ಲಿ ನಮಗೆ ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ. ಹೀಗಿರುವಾಗ ಮೊಬೈಲ್ ಅನ್ನೋ ದೂರದ ಸಂಬಂಧಿಯನ್ನು ನಮ್ಮ ಅತೀ ಹತ್ತಿರದ ಸಂಬಂಧದ ಒಳಗೆ ಸೇರಿಸಿಕೊಂಡಿದ್ದು ಸರಿಯಾಗಿಯೇ ಇದೆ. ಆದರೆ ಆ ಸಂಬಂಧಿಯನ್ನು ನಾವು ಅತೀಯಾಗಿ ಅವಲಂಬಿಸಿ ಇಂದು ಅವನಿಲ್ಲದೆ ನಾವಿಲ್ಲ ಎನ್ನುವ ಸ್ಥಿತಿಗೆ ಬಂದು ತಲುಪಿದ್ದೇವೆ. ಎಷ್ಟರ ಮಟ್ಟಿಗೆ ಎಂದರೆ ಮೊಬೈಲ್ ಈ ಪ್ರಪಂಚಕ್ಕೆ ಕಾಲಿಡುವುದಕ್ಕಿಂತ ಮೊದಲು ನಮ್ಮ ಪೂರ್ವಜರು ಅದು ಹೇಗೆ ಬದುಕಿದರೋ ಎಂಬ ಅನುಮಾನ ಬರುವಷ್ಟು. ಹಾಗಿದ್ದರೆ ನಿಜವಾಗಿಯೂ ಈ ಮೊಬೈಲ್ ಬಳಕೆ ನಮ್ಮ ಜೀವನಕ್ಕೆ ಇಷ್ಟೊಂದು ಅವಶ್ಯಕತೆ ಇದೆಯಾ? ಇದನ್ನು ನಾವು ನಮ್ಮ ಬದುಕುವ ಅನಿವಾರ್ಯತೆ ಎಂದು ಭಾವಿಸಿಕೊಂಡು ಬದುಕುವುದರಲ್ಲಿ ಏನಾದರೂ ಅರ್ಥ ಇದೆಯಾ?

ಈಗ ಅದ್ಯಾವ ಮನೆಯಲ್ಲಾದರೂ ನೋಡಿ, ಅತ್ತೆ-ಸೊಸೆ ಜಗಳ, ಚಿಕ್ಕ ಮಕ್ಕಳ ಚೀರಾಟ, ಪಾಲಕರ ಕಿತ್ತಾಟ ಬಹಳ ಕಡಿಮೆ ಆಗಿ ಹೋಗಿದೆ. ಮೊದಲೆಲ್ಲಾ ಪಕ್ಕದ ಮನೆಯಲ್ಲಿ ಏನು ನಡೆಯುತ್ತಿದೆ ಎಂದು ಕೇಳಿಸಿಕೊಳ್ಳುವ ಕೆಟ್ಟ ಕುತೂಹಲ ಎಲ್ಲರಲ್ಲೂ ಇರುತ್ತಿತ್ತು. ಆದರೆ ಇಂದು ಪಕ್ಕದ ಮನೆಯವರ ಸುದ್ದಿ ಬಿಡಿ, ನಮ್ಮ ಪಕ್ಕಕ್ಕಿದ್ದವರ ಮಾರು ಕೇಳಿಸಿಕೊಳ್ಳುವುದೂ ನಮಗೆ ಬೇಕಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಮನೆಯಲ್ಲಿ ಎಷ್ಟು ಮಂದಿಇರುತ್ತಾರೋ ಅವರೆಲ್ಲರ ಬಳಿಯೂ ಒಂದೊಂದು ಮೊಬೈಲ್ ಇದ್ದೇ ಇರುತ್ತದೆ. ಯಾಕೆಂದರೆ ಬಿಡುವಿನ ಸಮಯದಲ್ಲಿ ಆ ಮೊಬೈಲ್ ಅವರ ಕೈಗೆ ಬಂದಾಗ ಒಬ್ಬೊಬ್ಬರದ್ದೂ ಒಂದೊಂದು ಪ್ರಪಂಚವಾಗಿರುತ್ತದೆ. ಅಂದು ಚಿಕ್ಕ ಮಕ್ಕಳು ಅಳದಂತೆ, ಕೀಟಲೆ ಮಾಡದಂತೆ ನೋಡಿಕೊಳ್ಳಲು ಮನೆವರೆಲ್ಲಾ ಒಟ್ಟಾಗುತ್ತಿದ್ದರು, ಅವರ ಜೊತೆ ನಲಿದು ಆ ಮಗುವಿನ ನಗುವಿಗೆ ಕಾರಣವಾಗುತ್ತಿದ್ದರು.

# YOUNG ಅಂದ್ರೆ ಹೆಂಗೇಗೂ ಇರೋದಲ್ಲ.....





■ ಶಿವರಾಜ (ಚಿನ್ಮಯಿ) ಸೋಮನಾಳ್

ಯುವಕರ ರಾಜಕೀಯದಲ್ಲಿ ಪಾಲ್ಗೊಳ್ಳುವುದು ಮುಖ್ಯವಾದದ್ದು ಎಂಬುದರಲ್ಲಿ ಸಂಶಯವೇ ಇಲ್ಲ. ಅವರು ಹೊಸ ರಾಜಕೀಯಕ್ಕೆ ಉತ್ಸಾಹ ತರುತ್ತಾರೆ. ಆದರೆ, ಈ ತಾಜಾ ಉತ್ಸಾಹವು ಕೆಲವೊಮ್ಮೆ ರಾಜಕೀಯ ವ್ಯವಸ್ಥೆಗೆ ಬೇರೆಯೇ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಯುವಕರು ದೇಶದ ಭವಿಷ್ಯವನ್ನು ರೂಪಿಸುತ್ತಾರೆ ಎಂಬ ಸತ್ಯದ ಜೊತೆಗೆ, ಅವರ ನಿರಂತರ ಶಿಕ್ಷಣದ ಕೊರತೆ, ಅನುಭವದ ಅಭಾವ, ಮತ್ತು ಭಾವನಾತ್ಮಕ ಹೊತ್ತೊತ್ತುತ್ತೆಯಿಂದಾಗಿ ಹಲವಾರು ಸಮಸ್ಯೆಗಳು ರಾಜಕೀಯದಲ್ಲಿ ಎದುರಾಗುತ್ತವೆ.

**2. ಅನುಭವದ ಕೊರತೆ**

ಯುವಕರು ರಾಜಕೀಯದಲ್ಲಿ ತೀರಾ ಅನುಭವಹೀನರಾಗಿರುತ್ತಾರೆ. ಅವರು ಸಂಪೂರ್ಣ ರಾಜ-ಕೀಯ ದೃಷ್ಟಿಕೋನವನ್ನು ಹೊಂದಿರುವುದಿಲ್ಲ ಮತ್ತು ಅನುಭವದ ಕೊರತೆಯಿಂದಾಗಿ ಕೆಲವೊಮ್ಮೆ ತುರ್ತು ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಪ್ರಭಾವಿಗಳು ನಮ್ಮನ್ನು ಹಿಂಬಲಾಲಕರನ್ನು ಮಾಡಿಕೊಂಡಿದ್ದಾರೆ ಅಂ-ದುಕೊಳ್ಳುತ್ತಾರೆ ಅನುಭವದ ಕೊರತೆಯಿಂದಾಗಿ ಸರ್ಕಾರದ ನಿರ್ವಹಣೆ ಮತ್ತು ಸಾರ್ವಜನಿಕರ ಆಶೋತ್ತರಗಳ ಕುರಿತು ಪ್ರಾಮಾಣಿಕ ದೃಷ್ಟಿಕೋನ ಪಡೆಯಲು ಅವರಿಗೆ ಸಾಧ್ಯವಿಲ್ಲ.

**3. ಪ್ರಭಾವಕ್ಕೆ ಒಳಗಾಗುವ ಸಾಧ್ಯತೆ**

ಯುವ ನಾಯಕರು ಹಿರಿಯ ನಾಯಕರು, ಕೆಲವೊಮ್ಮೆ ನಂಬಿಕೆಯೇ ಇಲ್ಲದ ನಾಯಕರಿಂದ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚಿವೆ.ಇದರಿಂದಾಗಿ ಅವರು ಕೆಲವೊಮ್ಮೆ ಖಿನ್ನತೆ ಮತ್ತು ತೊಂದರೆಯ ರಾಜಕೀಯದತ್ತ ಹೊರಳುವ ಸಾಧ್ಯತೆಯು ಇರುತ್ತದೆ, ಇದು ದೇಶದ ಒಳಿತಿಗೆ ವಿದ್ರೋಹಕಾ-ರಿಯಿರುತ್ತದೆ.

**4. ದೀರ್ಘಕಾಲೀನ ದೃಷ್ಟಿಕೋನದ ಕೊರತೆ**

ಯುವಕರು ದೀರ್ಘಕಾಲೀನ ಯೋಜನೆಗಳ ಬದಲು ತಕ್ಷಣದ ಫಲಿತಾಂಶಗಳನ್ನು ಮಾತ್ರ ಗಮನಿಸುತ್ತಾರೆ. ರಾಜಕೀಯದಲ್ಲಿ ದೀರ್ಘಕಾಲೀನ ಯೋಜನೆಗಳು ಮುಖ್ಯವಾಗಿದ್ದು, ಸಮಾಜದ ಮತ್ತು ದೇಶದ ಸಮಗ್ರ ಬೆಳವಣಿಗೆಗೆ ಅವು ಅನಿವಾರ್ಯ.

**5. ಭಾವನಾತ್ಮಕ ಉತ್ಸಾಹ**

ಯುವಕರು ಹಸಿವು ಮತ್ತು ಕ್ರಾಂತಿದಾಯಕ ಮನೋಭಾವದಿಂದ ತುಂಬಿರುತ್ತಾರೆ. ಆದರೆ, ಈ ಉತ್ಸಾಹವು ಕೆಲವೊಮ್ಮೆ ದ್ವೇಷ ಮತ್ತು ಹೊಟ್ಟೆಯೆಂದು ಬದಲಾಗುತ್ತದೆ.

**ಉದಾಹರಣೆಗೆ,** ಜಾಗತಿಕ ಮತ್ತು ಸ್ಥಳೀಯ ಸಮಸ್ಯೆಗಳ ಬಗ್ಗೆ ತೀಕ್ಷ್ಣ ಪ್ರತಿಕ್ರಿಯೆ ನೀಡುವುದರ ಬದಲು ತಾಳ್ಮೆಯ ನಿರ್ಧಾರಗಳಿಗೆ ಒತ್ತು ನೀಡಲು ಯುವಕರಿಗೆ ಸಾಕಷ್ಟು ಅನುಭವವಿರುವುದಿಲ್ಲ.

**6. ಸಾಮಾಜಿಕ ಮಾಧ್ಯಮದ ದುರಪಯೋಗ**

ಯುವ ರಾಜಕಾರಣಿಗಳು ಸಾಮಾಜಿಕ ಮಾಧ್ಯಮದ ಮೇಲೆ ಹೆಚ್ಚು ಅವಲಂಬಿತರಾಗಿರುತ್ತಾರೆ, ಮತ್ತು ಕೆಲವೊಮ್ಮೆ ತನ್ನ ಅಭಿಪ್ರಾಯಗಳನ್ನು ತಕ್ಷಣವೇ ಪ್ರಪಂಚಕ್ಕೆ ಹಂಚಿಕೊಳ್ಳುವ ಮೂಲಕ ತಮ್ಮ ಭಾವನೆಗಳನ್ನು ತಪ್ಪಾಗಿ ಪ್ರದರ್ಶಿಸುತ್ತಾರೆ. ಸಾಮಾಜಿಕ ಮಾಧ್ಯಮದಲ್ಲಿ ನಿಷ್ಕಪಟವಾಗಿ ಪಾಲ್ಗೊಳ್ಳುವ ಮೂಲಕ ತಮ್ಮ ವಿಶ್ವಾಸಾರ್ಹತೆ ಹಾಗೂ ಜನಾಭಿಪ್ರಾಯವನ್ನು ಕಳೆದುಕೊಳ್ಳುತ್ತಾರೆ.

**7. ಸಮಾರೋಪ**

ರಾಜಕೀಯದಲ್ಲಿ ಯುವಕರ ಪಾಲ್ಗೊಳ್ಳುವುದು ನಮ್ಮ ರಾಷ್ಟ್ರದ ಪ್ರಗತಿಗೆ ಮಹತ್ವದ್ದಾಗಿದೆ. ಆದರೆ, ಅವರ ನಂಬಿಕೆಗಳು, ಭಾವನೆಗಳು ಮತ್ತು ಅನುಭವದ ಕೊರತೆಯು ಹಲವೊಮ್ಮೆ ಅವರನ್ನು ತೊಂದರೆಗಳಿಗೆ ಒಯ್ಯಬಹುದು. ಯುವಕರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನದೊಂದಿಗೆ ಅವರು ದೇಶದ ಸರ್ವತೋಮುಖ ಪ್ರಗತಿಗೆ ಪೂರಕರಾಗುವಂತೆ ಮಾಡುವಂತೆ ಮಾಡಲು ಎಲ್ಲಾ ರಾಜಕೀಯ ಪಕ್ಷಗಳ ಜವಾಬ್ದಾರಿಯಾಗಿದೆ.




# ಶಿವಣ್ಣನ ವಿಶ್ವರೂಪ "ಭೈರತಿ ರಣಗಲ್" ನಲ್ಲಿ ಅನಾವರಣ

ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅಭಿನಯದ 'ಭೈರತಿ ರಣಗಲ್' ಸಿನಿಮಾ (ಖಚುಡಿಚಿಣಖ ಖಚಿಟಿಚಿರಂಚಿಟ ಒಂತುಜ) ಶುಕ್ರವಾರ ಅದ್ದೂರಿಯಾಗಿ ರಿಲೀಸ್ ಆಗಿದೆ. ಕರ್ನಾಟಕದಲ್ಲಿ ಸುಮಾರು 365ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗಿದ್ದು, ಶಿವಣ್ಣನ ಅಭಿಮಾನಿಗಳ ಸಂಭ್ರಮ ಮುಗಿಲುಮುಟ್ಟಿದೆ. ಈ ಚಿತ್ರವನ್ನು ನೋಡಿ ಪ್ರೇಕ್ಷಕರು ಏನಂದ್ರು ಎಂಬ ಮಾಹಿತಿ ಇಲ್ಲಿದೆ.

'ಮಫ್ತಿ' ಬಳಿಕ ಮತ್ತೆ ಶಿವಣ್ಣ ಹಾಗೂ ನರ್ತನ್ ಕಾಂಬಿನೇಷನ್ ಸಿನಿಮಾ ನೋಡುವುದಕ್ಕೆ ಸಿನಿಪ್ರಿಯರು ಕೂಡ ತುದಿಗಾಲಲ್ಲಿ ನಿಂತಿದ್ದರು. ಇದು 'ಮಫ್ತಿ' ಸಿನಿಮಾದ ಪ್ರೀಕ್ವೆಲ್ ಆಗಿದ್ದರಿಂದ ಬಿಡುಗಡೆಗೂ ಮುನ್ನವೇ ಈ ಸಿನಿಮಾ ಸಾಕಷ್ಟು ಕುತೂಹಲವನ್ನು ಹುಟ್ಟಾಕಿತ್ತು. ಮೊದಲ ದಿನ ಫ್ಯಾನ್ಸ್‌ಗಳಿಗಾಗಿ ವಿಶೇಷ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು.

ಮಫ್ತಿ' ಸಿನಿಮಾದಲ್ಲಿ ಶಿವಣ್ಣ ಪಾತ್ರ ಸಿನಿಪ್ರಿಯ-ರಿಗೆ ಸಿಕ್ಕಾಪಟ್ಟೆ ಆಗಿತ್ತು. ಭೈರತಿ ರಣಗಲ್ ಯಾರು? ಈ ಹಿಂದೆ 'ಭೈರತಿ ರಣಗಲ್' ಹೇಗಿದ್ದ? ಭೈರತಿ ರಣಗಲ್ ವೈಲೆಂಟ್ ಆಗಿದ್ದು ಯಾಕೆ? ಇಂತಹ ಹಲವು ಪ್ರಶ್ನೆಗಳಿಗೆ ಈ ಪ್ರೀಕ್ವೆಲ್‌ನಲ್ಲಿ ಉತ್ತರ ಕೊಡಲಾಗಿದೆ. ಸಿನಿಮಾ ಅದ್ಭುತವಾಗಿದ್ದು, ಪಕ್ಕಾ ಪೈಸಾ ವಸೂಲ್ ಚಿತ್ರವಾಗಿದೆ. ಶಿವಣ್ಣ ಅವರ ಮಾಸ್ ಡೈಲಾಗ್‌ಗಳು ಸೂಪರ್ ಅಗಿದ್ದು, ಯಂಗ್ ಅಂಡ್ ಎನರ್ಜಿಟಿಕ್ ಆಕ್ಷನ್‌ನಿಂದ ಶಿವಣ್ಣನ ವಿಶ್ವರೂಪವನ್ನು ಈ ಚಿತ್ರದಲ್ಲಿ ತೋರಿಸಿದ್ದಾರೆ ಎಂದು ಪ್ರೇಕ್ಷಕರು ತಿಳಿಸಿದ್ದಾರೆ.
ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಅವರ ನಟನೆ, ಮ್ಯಾನರಿಸಂ, ಸ್ಟೈಲ್, ಡೈಲಾಗ್ ಎಲ್ಲವೂ ಭೈರತಿ ರಣಗಲ್ ಚಿತ್ರದ ಮೇಲಿನ ಆಸಕ್ತಿ ಇನ್ನಷ್ಟು ಹೆಚ್ಚಿಸಿವೆ. ಸಿನಿಮಾ ಪ್ರದರ್ಶನಕ್ಕೂ ಮೊದಲೇ ಥಿಯೇಟರ್ ಮುಂಭಾಗ ಶಿವಣ್ಣನ ಅಭಿಮಾನಿಗಳು ಪಟಾಕಿ ಹೊಡೆದು, ಹಾಡುಗಳಿಗೆ ಡ್ಯಾನ್ಸ್ ಮಾಡಿ, ಡೊಳ್ಳು, ತಮಟೆ ಸೌಂಡ್‌ಗೆ ಭರ್ಜರಿ ಸ್ಟೆಪ್ಸ್ ಹಾಕಿ ಸಂಭ್ರಮಿಸಿದ್ದಾರೆ. ಈ ಹಿಂದಿನ ಎಲ್ಲ ಸಿನಿಮಾಗಳಿಗಿಂತ ಭೈರತಿ ರಣಗಲ್ ಸಿನಿಮಾ ಸೂಪರ್ ಆಗಿ ಮೂಡಿ ಬಂದಿದೆ ಎಂದು ಅಭಿಮಾನಿಗಳು ಅಭಿಪ್ರಾಯ ತಿಳಿಸಿದ್ದಾರೆ. ಇನ್ನು ಶಿವಣ್ಣನ ಫ್ಯಾನ್ಸ್ ಕಪ್ಪು ಶರ್ಟ್, ಪಂಚೆ ಧರಿಸಿ ಸಿನಿಮಾ ನೋಡಲು ಆಗಮಿಸಿದ್ದು ವಿಶೇಷ ಎನಿಸಿತು.

ಇನ್ನು ಈ ಸಿನಿಮಾ ನಿರ್ಮಾಪಕಿ ಗೀತಾ ಶಿವರಾಜ್ ಕುಮಾರ್ ಕೂಡ ಮುಂಜಾನೆತೇ ಅಭಿಮಾನಿಗಳೊಂದಿಗೆ ಫ್ಯಾನ್ಸ್ ಶೋನಲ್ಲಿ ಸಿನಿಮಾ ವೀಕ್ಷಣೆ ಮಾಡಿದರು. ನಟ ಡಾಲಿ ಧನಂಜಯ್ ಕೂಡ ಭೈರತಿ ರಣಗಲ್ ಸಿನಿಮಾ ನೋಡಿ ಖುಷಿ ವ್ಯಕ್ತಪಡಿಸಿದ್ದಾರೆ.

ಭೈರತಿ ರಣಗಲ್ ಸಿನಿಮಾದಲ್ಲಿ ಶಿವರಾಜ್ ಕುಮಾರ್ ಜತೆಗೆ ರುಕ್ಮಿಣಿ ವಸಂತ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ನರ್ತನ್ ನಿರ್ದೇಶನ, ಗೀತಾ ಶಿವರಾಜ್ ಕುಮಾರ್ ನಿರ್ಮಾಣದ ಸಿನಿಮಾಗೆ ರವಿ ಬಸ್ರೂರು ಸಂಗೀತ ನೀಡಿದ್ದಾರೆ. ಚೇತನ್ ಡಿಸೋಜಾ ಮತ್ತು ದಿಲೀಪ್ ಸುಬ್ರಹ್ಮಣ್ಯನ್ ರೂಪಿಸಿರುವ ಸಾಹಸ ಸಂಯೋಜನೆ ಫೈಟ್‌ಗಳ ಬಗ್ಗೆ ನಿರೀಕ್ಷೆ ಹುಟ್ಟುಹಾಕಿದೆ. ಖ್ಯಾತ ಬಾಲಿವುಡ್ ನಟ ರಾಹುಲ್ ಬೋಸ್ ಜತೆಗೆ ಶಬೀರ್ ಕಲ್ಲರಕಲ್, ಛಾಯಾ ಸಿಂಗ್, ದೇವರಾಜ್, ಮಧು ಗುರುಸ್ವಾಮಿ, ಬಾಬು ಹಿರಣ್ಣಯ್ಯ ಚಿತ್ರದಲ್ಲಿ ಅಭಿನಯಿಸಿದ್ದಾರೆ.

# ಬೆಂಗಳೂರಿನ ನಾರಾಯಣ ಹೃದಯಾಲಯದ ನಿರ್ದೇಶಕರು ಹಾಗೂ ವಿಶ್ವದ ಅಗ್ರಮಾನ್ಯ ಹೃದಯತಜ್ಞರಲ್ಲಿ ಒಬ್ಬರಾದ ಡಾ.ದೇವಿಶೆಟ್ಟಿಯವರ ಸಂದೇಶ...!



"ನನ್ನೆಲ್ಲಾ ಮಿತ್ರರೇ...

ಇತ್ತೀಚಿನ ಕೆಲ ವರ್ಷಗಳಿಂದ ನಾನು, ನನಗೆ ವೈಯಕ್ತಿಕವಾಗಿ ತೀರಾ ಪರಿಚಿತರಿದ್ದ 8-10 ಜನರನ್ನು ಕಳೆದು ಕೊಂಡಿದ್ದೇನೆ.. ಅದರಲ್ಲೂ 40 ರ ಆಸುಪಾಸಿನಲ್ಲಿದ್ದ ಕೆಲ ಸೆಲೆಬ್ರಿಟಿಗಳು 'ಫಿಟ್ ' ಆಗಿರಲು ಅತೀ ಹೆಚ್ಚು ಶ್ರಮಿಸಿ ಮರಣಿಸಿದ್ದಾರೆ.. ಆದರೆ ಅವರೆಲ್ಲಾ ಕೇವಲ ಫಿಟ್ ಆಗಿರುವಂತೆ, ಸಿಕ್ಸ್ ಪ್ಯಾಕ್ ಹೊಂದಿರುವಂತೆ ಕಾಣುತ್ತಿದ್ದರಷ್ಟೆ....

ಜೀವನದಲ್ಲಿ ಎಲ್ಲದಕ್ಕೂ 'ಮಿತ' ವೇ ಮಂತ್ರ.. ಸೊನ್ನೆ ಅಥವಾ ನೂರು ಈ ಎರಡರಲ್ಲಿ ಯಾವುದರ ಕಡೆಗಿನ ತೀವ್ರ ತುಡಿತವಿದ್ದರೂ ಅದು ತಪ್ಪು. ಒಂದಿಪ್ಪತ್ತು ನಿಮಿಷಗಳ ಕಾಲದ ಮಿತವಾದ ವ್ಯಾಯಾಮ, ಎಲ್ಲವನ್ನೂ ತಿನ್ನುವುದು, ಅತಿ ಪಥ್ಯ ಬೇಕಿಲ್ಲ.. ಕಿವಿ ಹಣ್ಣು.. ಆಲೀವ್ ಎಣ್ಣೆ.. ಇವೆಲ್ಲಾ ಅಲ್ಲ.. ನಿಮ್ಮ ಪೂರ್ವಜರು ಏನೆಲ್ಲಾ ತಿನ್ನುವುದನ್ನು ರೂಢಿ ಮಾಡಿದ್ದಾರೋ ಅಂತಹ ಸ್ಥಳೀಯ, ಆಯಾ ಋತುಮಾನದಲ್ಲಿ ಸಿಗುವ, ನಿಮ್ಮ ಊರಿನಲ್ಲೇ ಲಭ್ಯವಾಗುವ ಎಲ್ಲವನ್ನೂ ಮಿತವಾಗಿ ತಿನ್ನಿ.. ಪೂರ್ಣ ಏಳು ಗಂಟೆಗಳ ನಿದ್ರೆ ಮಾಡಿ.. ನಿಮ್ಮ ದೇಹವನ್ನು ಸ್ಟೀರಾಯ್ಡ್ ಅಥವಾ ಸಾಧನೆ ಹೆಚ್ಚಿಸುವ ಔಷಧಗಳನ್ನು ಸೇವಿಸದೇ ಗೌರವಿಸಿ.

ನೀವು ಏನೆಲ್ಲಾ ತಿನ್ನುತ್ತಾ ಬೆಳೆದಿರೋ ಅವನ್ನೇ ಮಿತ ಪ್ರಮಾಣದಲ್ಲಿ ತಿನ್ನಿ . ದಿನನಿತ್ಯ 20 ರಿಂದ 30 ನಿಮಿಷಗಳ ಕಾಲ ವ್ಯಾಯಾಮ, ಒಂದು ಉತ್ತಮ ನಡಿಗೆ.. ಇವಿಷ್ಟು ಸಾಕು.. ಎಲ್ಲಾ ರೀತಿಯ ಶಕ್ತಿವರ್ಧಕ, ಪೂರಕ ಆಹಾರ ನಿಲ್ಲಿಸಿ.. ಕುಡಿಯುವ ಅಭ್ಯಾಸವಿದ್ದರೆ ವಾರಕ್ಕೆ ಕೆಲವು ಪೆಗ್ ಗಳಿಗಷ್ಟೇ ಸೀಮಿತಗೊಳಿಸಿ.. ಧೂಮಪಾನ ಬಿಡಲು ಸಾಧ್ಯವೇ ಇಲ್ಲ ಎನ್ನುವುದಾದರೆ ದಿನಕ್ಕೆ ಒಂದೆರಡಕ್ಕೆ ಸೀಮಿತಗೊಳಿಸಿ. ನನ್ನ ಮಾತಿನ ಸಾರಾಂಶ ನಿಮಗೆ ಅರ್ಥವಾಗಿರಬೇಕು.. ಎಲ್ಲವೂ ಇರಲಿ.. ಮಿತವಾಗಿರಲಿ.. ನಿಮ್ಮ ನಿತ್ಯಕರ್ಮದಲ್ಲಿ ಸ್ವಲ್ಪ ಮೌನ ಧ್ಯಾನವನ್ನು ಸೇರಿಸಿಕೊಳ್ಳಿ, ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ದೇಹದ ಮಾತಿಗೆ ಕಿವಿಗೊಡಿ.. ಅದನ್ನು ಅರ್ಥಮಾಡಿ ಕೊಳ್ಳಿ..

40 ಕ್ಕೆ ನಿಮ್ಮ ದೇಹ ಸಾಕಷ್ಟು ಬದಲಾವಣೆಗೊಳಗಾಗುತ್ತದೆ, 50 ಕ್ಕೆ ಇನ್ನಷ್ಟು ಹೆಚ್ಚು.. 60 ಮೀರಿದೊಡನೆ ದೇಹ ಮಂದವಾಗತೊಡಗುತ್ತದೆ.. 70 ಮೀರಿದೊಡನೆ ಅಂತ್ಯಕ್ಕೆ ಅಣಿಗೊಳ್ಳಲಾರಂಭಿಸುತ್ತದೆ..80 ಮೀರಿತೆಂದರೆ ಪ್ರತಿ ವರ್ಷವೂ ಒಂದೊಂದು ಬೋನಸ್.. ಆದ್ದರಿಂದ ಅರವತ್ತು ಎಂದರೆ ಹೊಸ ನಲವತ್ತು, ಐವತ್ತು ಎಂದರೆ ಹೊಸ ಮೂವತ್ತು, ಎನ್ನುವುದನ್ನೆಲ್ಲಾ ಬಿಟ್ಟು ಬಿಡಿ. ಅದು ಹಾಗಲ್ಲ..ನೀವು 40 ಅಥವಾ 50 ಮೀರಿ ಆರೋಗ್ಯವಂತರಾಗಿದ್ದರೆ ಅದಕ್ಕಾಗಿ ಧನ್ಯತೆ ಭಾವ ಹೊಂದಿರಿ.. ನಿಮ್ಮ ಹೃದಯದ ವೇಗಕ್ಕೆ ಹೊಂದುವಂತೆ ನಿಮ್ಮ ವೇಗವನ್ನೂ ವಯೋ ಮಾನಕ್ಕನುಗುಣವಾಗಿ ತಗ್ಗಿಸಿ ಸಂಯಮ ತೋರಿ. ನಿವೃತ್ತಿಯನ್ನು ಒಂದು ಸಕಾರಣಕ್ಕಾಗಿ ಸಲಹೆ ಮಾಡಲಾಗುತ್ತದೆ ಎಂಬುದನ್ನು ಅರಿಯಿರಿ.. ನೀವು ಹಿಂದೊಮ್ಮೆ ಸಹಿಸುತ್ತಿದ್ದ ಒತ್ತಡಗಳನ್ನು ಇದೀಗ ನಿಮ್ಮ ದೇಹ ಮತ್ತು ಮನಸ್ಸುಗಳು ಸಹಿಸಲಾರವು. ಹೊರಗಿನಿಂದ ನೀವು ಚೆನ್ನಾಗಿಯೇ ಕಾಣುತ್ತಿರಬಹುದು, ಅದಕ್ಕಾಗಿ ನಿಮ್ಮ ವಂಶವಾಹಿನಿಗೆ ಒಂದು ಕೃತಜ್ಞತೆ ಇರಲಿ.. ಆದರೆ ಒಳಗೆ, ನಿಮ್ಮ ಅಂಗಾಂಗಗಳಿಗೆ ವಯಸ್ಸಾಗುತ್ತಿದೆ....

ನೀವು 40 ಮೀರಿದ ವಯೋಮಾನದವರಾದರೆ ಈ ಮೇಲಿನದೆಲ್ಲಾ ಓದಿ. ಮೇಲೆ ತಿಳಿಸಿದ್ದಕ್ಕಿಂತ ತೀರಾ ಭಿನ್ನವಾದದ್ದನ್ನೇನಾದರೂ ನೀವು ಮಾಡುತ್ತಿದ್ದರೆ, ಈ ಕೂಡಲೇ ಬದಲಿಸಿ.. ನೀವು ಸಹಾ ಇನ್ನೊಂದು ಅಂಕಿ – ಅಂಶವಾಗಿ ಕೊನೆಯಾಗಲು ಬಯಸಲಾರಿರಿ ಎಂಬ ವಿಶ್ವಾಸ ನನಗಿದೆ." ಅಮೇರಿಕಾದಲ್ಲಿ ವೈದ್ಯಕೀಯ ಅಧಿಕಾರಿಗಳು ಪ್ರತಿಯೊಬ್ಬರಿಗೂ ಮತ್ತು ಎಲ್ಲ-ರಿಗೂ ಸಹಾಯ ಮಾಡಲು ಇದನ್ನು ಕಳುಹಿಸಿದ್ದಾರೆ. ದಯವಿಟ್ಟು ಓದಿ ಮತ್ತು ನಿಮ್ಮ ಬಗ್ಗೆ ಕಾಳಜಿ ವಹಿಸಿ – ಡಾ. ಒಕರೆ. ಕಿಡ್ನಿ ಕಾಯಿಲೆಯಿಂದ ಯುವಕರು ಯಾವ ಪ್ರಮಾಣದಲ್ಲಿ ಬಳಲುತ್ತಿದ್ದಾರೆ ಎಂಬುದು ಆತಂಕಕಾರಿ. ನಾನು ನಮಗೆ ಸಹಾಯ ಮಾಡುವಂತಹ ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿದ್ದೇನೆ. ಪ್ರಮುಖ – ಕಿಡ್ನಿ ಅತ್ಯುತ್ತಮವಾದುದನ್ನು ನಿರ್ಧರಿಸುತ್ತದೆ. ಕೇವಲ ಎರಡು (2) ದಿನಗಳ ಹಿಂದೆ, ಮೂತ್ರಪಿಂಡದ ಕಾಯಿಲೆಯ ಪರಿಣಾಮವಾಗಿ ನೈಜೀ-ರಿಯಾದ ನಟನ ನಿಧನದ ಸುದ್ದಿಯನ್ನು ನಾವೆಲ್ಲರೂ ಸ್ವೀಕ-ರಿಸಿದ್ದೇವೆ. ಸಾರ್ವಜನಿಕ ಕಾರ್ಯಗಳ ನಮ್ಮ ಸಚಿವರಾದ ಗೌರವಾನ್ವಿತ ಟೆಕೊ ಲೇಕ್ ಪ್ರಸ್ತುತ ಆಸ್ಪತ್ರೆಯಲ್ಲಿ ಮೂತ್ರಪಿಂಡದ ಸಮಸ್ಯೆಗಳೊಂದಿಗೆ ಲೈಫ್ ಸಪೋರ್ಟ್ ನ ಬೆಂಬಲ ದಲ್ಲಿದ್ದಾರೆ. ಮೂತ್ರಪಿಂಡದ ಕಾಯಿಲೆಯ ಈ ಭೀತಿಯನ್ನು ತಪ್ಪಿಸುವುದು ಹೇಗೆ ಎಂದು ನಾನು ನಿಮಗೆ ತೋರಿಸಲು ಬಯಸುತ್ತೇನೆ.

**ಇಲ್ಲಿ ಕಿಡ್ನಿ ಕಾಯಿಲೆಯ ಮೊದಲ 6 ಕಾರಣಗಳು:**

1. ಶೌಚಾಲಯಕ್ಕೆ ಹೋಗಲು ವಿಳಂಬ. ನಿಮ್ಮ ಮೂತ್ರವನ್ನು ನಿಮ್ಮ ಮೂತ್ರಕೋಶದಲ್ಲಿ ಹೆಚ್ಚು ಹೊತ್ತು ಇಡುವುದು ಕೆಟ್ಟ ಸಂಗತಿಯಾಗಿದೆ. ಪೂರ್ಣ ಬ್ಲಾ ಡರ್, ಬ್ಲಾಡರ್ ಹಾನಿಗೆ ಕಾರಣವಾಗಬಹುದು. ಮೂತ್ರಕೋಶದಲ್ಲಿ ಉಳಿಯುವ ಮೂತ್ರವು ಬ್ಯಾಕ್ಟೀರಿಯಾವನ್ನು ತ್ವರಿತವಾಗಿ ಗುಣಿಸುತ್ತದೆ. ಮೂತ್ರವು ಮೂತ್ರನಾಳ ಮತ್ತು ಮೂತ್ರಪಿಂಡಗಳಿಗೆ ಹಿಂತಿ-ರುಗಿದ ನಂತರ, ವಿಷಕಾರಿ ವಸ್ತುಗಳು ಮೂತ್ರಪಿಂಡದ ಸೋಂಕು, ನಂತರ ಮೂತ್ರದ ಸೋಂಕು, ಮತ್ತು ನಂತರ ನೆಫ್ರೈಟಿಸ್ ಮತ್ತು ಯುರೇಮಿಯಾಗಳಿಗೆ ಕಾರಣವಾಗಬಹುದು. ಪ್ರಕೃತಿ ಕರೆ ಮಾಡಿದಾಗ – ಸಾಧ್ಯವಾದಷ್ಟು ಬೇಗ ಅದನ್ನು ಮಾಡಿ.

2. ಹೆಚ್ಚು ಉಪ್ಪು ತಿನ್ನುವುದು. ನೀವು ಪ್ರತಿದಿನ 5.8 ಗ್ರಾಂ ಗಿಂತ ಹೆಚ್ಚಾಗಿ ಉಪ್ಪನ್ನು ಸೇವಿಸಬಾರದು.

3. ಹೆಚ್ಚು ಮಾಂಸ ತಿನ್ನುವುದು. ನಿಮ್ಮ ಆಹಾರದಲ್ಲಿ ಹೆಚ್ಚು ಪ್ರೋಟೀನ್ ನಿಮ್ಮ ಮೂತ್ರಪಿಂಡಗಳಿಗೆ ಹಾನಿಕಾರಕವಾಗಿದೆ. ಪ್ರೋಟೀನ್ ಜೀರ್ಣಕ್ರಿಯೆಯು ಅಮೋನಿಯಾವನ್ನು ಉತ್ಪಾದಿಸುತ್ತದೆ – ಇದು ನಿಮ್ಮ ಮೂತ್ರಪಿಂಡಗಳಿಗೆ ಬಹಳ ಹಾನಿಕಾರಕವಾಗಿದೆ. ಹೆಚ್ಚು ಮಾಂಸವು ಹೆಚ್ಚು ಮೂತ್ರಪಿಂಡದ ಹಾನಿಗೆ ಸಮನಾಗಿರುತ್ತದೆ.

4. ಹೆಚ್ಚು ಕೆಫೀನ್ ಕುಡಿಯುವುದು. ಕೆಫೀನ್ ಅನೇಕ ಸೋಡಾಗಳು ಮತ್ತು ತಂಪು ಪಾನೀಯಗಳ ಒಂದು ಅಂಶವಾಗಿದೆ. ಇದು ನಿಮ್ಮ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಮತ್ತು ನಿಮ್ಮ ಮೂತ್ರಪಿಂಡಗಳು ಬಳಲುವುದಕ್ಕೆ ಎಡೆಯಾಗಿದೆ. ಆದ್ದರಿಂದ ನೀವು ಪ್ರತಿದಿನ ಕುಡಿಯುವ ಕೋಕ್ ಪ್ರಮಾಣವನ್ನು ಕಡಿತಗೊಳಿಸಬೇಕು.

5.ನೀರು ಕುಡಿಯುವುದಿಲ್ಲ. ನಮ್ಮ ಮೂತ್ರಪಿಂಡಗಳು ಅವುಗಳ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಸರಿಯಾಗಿ ಹೈಡ್ರೀಕರಿಸಬೇಕು. ನಾವು ಸಾಕಷ್ಟು ಕುಡಿಯದಿದ್ದರೆ, ಮೂತ್ರಪಿಂಡಗಳ ಮೂಲಕ ಹರಿಯುವಷ್ಟು ದ್ರವವಿಲ್ಲದ ಕಾರಣ ವಿಷವು ರಕ್ತದಲ್ಲಿ ಸಂಗ್ರಹಗೊಳ್ಳಲು ಪ್ರಾರಂಭಿಸಬಹುದು. ಪ್ರತಿದಿನ 10 ಗ್ಲಾಸ್ ಗಿಂತ ಹೆಚ್ಚು ನೀರು ಕುಡಿಯಿರಿ. ನೀವು ಕುಡಿಯುತ್ತೀರಾ ಎಂದು ಪರೀಕ್ಷಿಸಲು ಸುಲಭವಾದ ಮಾರ್ಗವಿದೆ

ಸಾಕಷ್ಟು ನೀರು: ನಿಮ್ಮ ಮೂತ್ರದ ಬಣ್ಣವನ್ನು ನೋಡಿ; ಹಗುರವಾದ ಬಣ್ಣವಾದರೆ ಉತ್ತಮ.

**6. ತಡವಾಗಿ ಚಿಕಿತ್ಸೆ:** ನಿಮ್ಮ ಎಲ್ಲಾ ಆರೋಗ್ಯ ಸಮಸ್ಯೆಗಳಿಗೆ ಸರಿಯಾಗಿ ಚಿಕಿತ್ಸೆ ನೀಡಿ ಮತ್ತು ನಿಮ್ಮ ಆರೋಗ್ಯವನ್ನು ನಿಯಮಿತವಾಗಿ ಪರೀಕ್ಷಿಸಿ. ನಾವೇ ಸಹಾಯ ಮಾಡೋಣ ... ದೇವರು ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ಈ ವರ್ಷ ಪ್ರತಿಯೊಂದು ಕಾಯಿಲೆಯಿಂದ ರಕ್ಷಿಸುತ್ತಾನೆ.

**(3) ಈ ಮಾತ್ರೆಗಳನ್ನು ತಪ್ಪಿಸಿ, ಅವು ತುಂಬಾ ಅಪಾಯಕಾರಿ:**

* ಡಿ-ಕೋಲ್ಡ್
* ವಿಕ್ಸ್ ಆಕ್ಷನ್ -500
* ಆಕ್ಟಿಫೈ ಡ್
* ಕೋಲ್ಡಾರಿನ್
* ಕಾಸೋಮ್
* ನೈಸ್
* ನಿಮುಲಿಡ್
* ಸೆಟ್ರಿಜೆಟ್-ಡಿ

ಅವುಗಳು ಫೆನೈಲ್ ಪ್ರೊಪನಾಲ್-ಅಮೈಡ್, ಪಿಪಿಎ ಅನ್ನು ಒಳಗೊಂಡಿರುತ್ತವೆ ಪಾರ್ಶ್ವವಾಯುಗೆ ಕಾರಣ ವಾಗಿದ್ದು ಮತ್ತು ಯುಎಸ್‌ಎ ದಲ್ಲಿ ನಿಷೇದ ಪಡಿಸಿದ್ದಾರೆ. ಯುನೈಟೆಡ್ ಸ್ಟೇಟ್ಸ್ ವೈದ್ಯರು ಸಿಲ್ವರ್ ನೈಟ್ರೋ ಆಕ್ಸೈಡ್ನಿಂದ ಉಂಟಾಗುವ ಮಾನವರಲ್ಲಿ ಹೊಸ ಕ್ಯಾನ್ಸರ್ ಅನ್ನು ಕಂಡುಕೊಂಡಿದ್ದಾರೆ. ನೀವು ರೀಚಾರ್ಜ್ ಕಾರ್ಡ್‌ಗಳನ್ನು ಖರೀದಿಸಿದಾಗಲೆಲ್ಲಾ, ನಿಮ್ಮ ಉಗುರುಗಳಿಂದ ಸ್ಕ್ರಾಚ್ ಮಾಡಬೇಡಿ, ಏಕೆಂದರೆ ಇದು ಸಿಲ್ವರ್ ನೈಟ್ರೋ ಆಕ್ಸೈಡ್ ಲೇಪನವನ್ನು ಹೊಂದಿರುತ್ತದೆ ಮತ್ತು ಚರ್ಮದ ಕ್ಯಾನ್ಸರ್ಗೆ ಕಾರಣವಾಗಬಹುದು.

**ಪ್ರಮುಖ ಆರೋಗ್ಯ ಸಲಹೆಗಳು:**

1. ಎಡ ಕಿವಿಯಿಂದ ಫೋನ್ ಕರೆಗಳಿಗೆ ಉತ್ತರಿಸಿ.
2. ನಿಮ್ಮ ಔಷಧಿ ಯನ್ನು ತಣ್ಣೀರಿನ ಜೊತೆ ತೆಗೆದುಕೊಳ್ಳಬೇಡಿ
3. ಸಂಜೆ 5 ರ ನಂತರ ಹೆಚ್ಚಿನ ಊಟ ಸೇವಿಸಬೇಡಿ.
4. ಬೆಳಿಗ್ಗೆ ಹೆಚ್ಚು ನೀರು ಕುಡಿಯಿರಿ, ರಾತ್ರಿಯಲ್ಲಿ ಕಡಿಮೆ.
5. ರಾತ್ರಿ 10 ರಿಂದ ಬೆಳಿಗ್ಗೆ 4 ರವರೆಗೆ ಉತ್ತಮ ನಿದ್ರೆ ಸಮಯ.
6. ಔಷಧಿ ತೆಗೆದುಕೊಂಡ ನಂತರ ಅಥವಾ ಊಟ ಮಾಡಿದ ಕೂಡಲೇ ಮಲಗಬೇಡಿ.
7. ಫೋನ್‌ನ ಬ್ಯಾಟರಿ ಕೊನೆಯ ಬಾರ್‌ಗೆ ಕಡಿಮೆ ಇರುವಾಗ, ಫೋನ್‌ಗೆ ಉತ್ತರಿಸಬೇಡಿ, ಏಕೆಂದರೆ ವಿಕಿರಣವು 1000 ಪಟ್ಟು ಬಲವಾಗಿರುತ್ತದೆ.